ಉಚಿತ ಪ್ರತಿಗಳಿಗಾಗಿ ಮತ್ತು
ಉಚಿತ ಪತ್ರಿಕೆಗಳಿಗಾಗಿ
ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ




ಸತ್ಯವೇದದಲ್ಲಿನ ವಿಷಯಗಳ ಬಗ್ಗೆ ಹೆಚ್ಚಿನ ವಿವರ ಹಾಗೂ ಅಂಚೆ ಮೂಲಕ ಉಚಿತವಾಗಿ ಪಾಠಗಳನ್ನು ಪಡೆಯಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಬಹುದು.



ನಮ್ಮ ವಿಳಾಸ:

**ದ ಕ್ರಿಸ್ಟಡೆಲ್ಫಿಯನ್ಸ್**

ಅಂಚೆ ಪೆಟ್ಟಿಗೆ ಸಂಖ್ಯೆ 535, ಫ್ರೇಜರ್ ಟೌನ್

ಬೆಂಗಳೂರು - 560 005




# ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು


ಸಂಚಿಕೆ 5


- ಮಾರ್ಗವನ್ನು ಅನುಸರಿಸಿ
- ರಾಣಿಯನ್ನು ಸ್ವಾಗತಿಸುವುದು
- ವಿಧೇಯತೆ ಅಥವಾ ಒಳಗಾಗುವುದು
- ಸುಮ್ಮನೆ ನಿಂತು ದೇವರ ಅದ್ಭುತ ಕಾರ್ಯಗಳನ್ನು ಧ್ಯಾನಿಸು
- ಅಂಜೂರದ ಮರದ ದೃಷ್ಟಾಂತವೂ ಮತ್ತು ಯೇಸುಕ್ರಿಸ್ತನ ಎರಡನೇ ಬರೋಣವು

## ಕ್ರಿಸ್ಟಡೆಲ್ಫಿ0ಯನ್ನರು ಎಂದರೆ 0ಯಾರು?

ಕ್ರಿಸ್ಟಡೆಲ್ಫಿ0ಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆ0ಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿ0ಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಆಧಾರವಾಗಿ ಜೀವನವನ್ನು ನೆಡೆಸುವವರಾಗಿದ್ದೇವೆ.

ನಾವು 0ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾ0ಯ, ನೀತಿ ಮತ್ತು ಶಾಂತಿ0ಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿ0ಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ 0ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾ0ಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇ0ಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆ0ಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ 0ಯೆಹೋವನನ್ನು ಪೂರ್ಣ ಹೃದ0ಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆ0ಯವನನ್ನು ನಿನ್ನಂತೆ0ಯೇ ಪ್ರೀತಿಸಬೇಕು ಎಂಬವುಗಳೇ.

**Co-ordinator : Linus Daniel**

**e-mail : info@choose2live.info**
http://www.choose2live.info/noothana_shristi

**Contact:**
The Christadelphians,
P.O.Box No 535,
Bangalore 560 005,
India.

### ನೂತನ ಸೃಷ್ಟಿ ಪತ್ರಿಕೆ0ಯ ತಂಡ

ಲೀನಸ್ ಡ್ಯಾನಿ0ಯಲ್ : ಸಂ0ಯೋಜಕರು

ಚೈತ್ರ ಸ್ವರೂಪ : ಕಾ0ರ್ಯ ನಿರ್ವಹಣೆ, ಪುನರವಲೋಕನ ಮತ್ತು ಡಿ.ಟಿ.ಪಿ ಸಂ0ಯೋಜಕರು.

ರೆವರೆಂಡ್ ರಾಸ್‌ಪಾಲ್‌ರವರಿಗೆ ವಿಶೇಷ ಕೃತಜ್ಞತೆಗಳು

ನಿಮ್ಮನ್ನು ಈ ಪತ್ರಿಕೆ0ಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರ0ಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿ0ಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿ0ಯಾಗಿದೆ.
ಈ ಪತ್ರಿಕೆ0ಯಲ್ಲಿರುವ ಎಲ್ಲಾ ವಸ್ತುವಿಷ0ಯಗಳನ್ನು ಕ್ರಿಸ್ಟಡೆಲ್ಫಿ0ಯನ್ನರ ಆಂಗ್ಲ ಭಾಷೆ0ಯ ವಿಷ0ಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

*"ಹೀಗಿರಲಾಗಿ 0ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿ0ಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]*



## ಮಾರ್ಗವನ್ನು ಅನುಸರಿಸಿ :

ನಿಮಗಿಂತ ಮುಂಚೆ ನಡೆದ ಅನೇಕಾನೇಕರ ದಾರಿ0ಯಲ್ಲೇ ನಡೆ0ಯುವುದು ಆದರಣೆ ನೀಡುವಂತದ್ದಾಗಿರುತ್ತದೆ. ಅದು ಸುರಕ್ಷಿತವೂ ಸುಭದ್ರವೂ ಆಗಿರುವಂತೆ ಕಾಣಿಸುತ್ತದೆ. ಆ ದಾರಿ0ಯಲ್ಲೇ ನಡೆ0ಯುವುದು ಪ್ರ0ಯೋಜನಕರವಾದದ್ದಾಗಿರುವಂತೆ0ಯೂ ಇದೆ. ಹಾಗಿಲ್ಲದಿದ್ದರೆ ಹಿಂದಣ ಸಂಚಾರಕರೆಲ್ಲಾ ದಡ್ಡರಾಗಿದ್ದಿರುತ್ತಿದ್ದರು. ಆದ್ದರಿಂದಲೇ ಗುಂಪನ್ನನುಸರಿಸುವುದೇ ಒಳ್ಳೆ0ಯದೆನಿಸುತ್ತದೆ.

ಆದರೆ ಮುಂಚೆ ಹೋದವರೆಲ್ಲರೂ ಸರಿಯಿಲ್ಲದ ತಪ್ಪುದಾರಿಗೆ ಎಳೆ0ಯಲ್ಪಟ್ಟಿದ್ದರೆ? ಬಹುಶಃ ಅವರೆಲ್ಲರೂ ತಪ್ಪಾದ ಮಾರ್ಗದಲ್ಲೇ ಹೋಗಿದ್ದರೆ? ಅಥವಾ ತಪ್ಪಾದ ದಿಕ್ಕಿನಲ್ಲಿ ತಿರುಗಿದ್ದರೆ? ಏನಾಗುವುದು?

## ಎಲ್ಲರೂ ತಪ್ಪಿಹೋಗಿದ್ದಾರೆ

ಪ್ರತಿ0ಯೊಬ್ಬನೂ ಮಾರ್ಗ ತಪ್ಪಿದ್ದಾನೆಂದು, ದಾರಿಬಿಟ್ಟಿದ್ದಾನೆಂದೂ, ಕಳೆದು ಹೋಗಿದ್ದಾನೆಂದೂ ಸತ್ಯವೇದವು ಹೇಳುತ್ತದೆ. ಪ್ರತಿ0ಯೊಬ್ಬನೂ ಸಹ! ಇಂತಹ ನಿರ್ದಿಷ್ಟ ಹೇಳುವಿಕೆ0ಯ ನಿದರ್ಶನವು ಹೀಗಿದೆ.

"ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ, ತಿಳುವಳಿಕೆ0ಯುಳ್ಳವನು ಇಲ್ಲ, ದೇವರನ್ನು ಹುಡುಕುವವನು ಇಲ್ಲ ಎಲ್ಲರೂ ದಾರಿತಪ್ಪಿ ನಡೆ0ಯುತ್ತಾರೆ ....... ಒಳ್ಳೇದನ್ನು ಮಾಡುವವನು ಇಲ್ಲ ಒಬ್ಬನಾದರೂ ಇಲ್ಲ .......... ಅವರು ಹೋದ ದಾರಿಗಳಲ್ಲಿ ನಾಶಸಂಕಟಗಳು ಉಂಟಾಗುತ್ತವೆ, ಸಮಾಧಾನದ ಮಾರ್ಗವನೇ ಅರಿ0ಯರು" (ರೋಮಾಪುರ 3:10–17).

"ಮನುಷ್ಯನ ದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿ0ಯುಂಟು ಅದು ಕಟ್ಟಕಡೆಗೆ ಮರಣಮಾರ್ಗವೇ" (ಜ್ಞಾನೋಕ್ತಿ 14:12).



"ಜ್ಞಾನ ಮಾರ್ಗದಿಂದ ತಪ್ಪಿದವನಿಗೆ ಪ್ರೇತಸಮೂಹವೇ ವಿಶ್ರಾಂತಿಸ್ಥಾನ" (ಜ್ಞಾನೋಕ್ತಿ 21:16).

**ಇದನ್ನು ತಿಳುಕೊಳ್ಳಲು ಮನಸ್ಸಿದೆ0ಯೋ?**

ಜ್ಞಾನಿ0ಯಾದ ಮನುಷ್ಯನು ದೇವರಿಂದ ಸ್ಫೂರ್ತಿಹೊಂದಿ ಜ್ಞಾನೋಕ್ತಿಗಳ ಪುಸ್ತಕವನ್ನು ಬರೆದಿರುತ್ತಾನೆ.

ನಾವಾಗಿಯೇ ಹೋಗಬೇಕೆಂದು ನೆನೆಸುವ ದಾರಿಗೂ, ಸರಿಯಾಗಿ ಅರ್ಥಮಾಡಿಕೊಂಡು ಹೋಗಬೇಕಾದ ದಾರಿಗೂ ಮಧ್ಯೆ ಇರುವ ಮುಖ್ಯವ್ಯತ್ಯಾಸವನ್ನು ಕಂಡುಕೊಂಡಿರುತ್ತಾನೆ. ಅಪೋಸ್ತಲನಾದ ಪೌಲನು ರೋಮನ್ನರಿಗೆ ಬರೆದ ಪತ್ರಿಕೆಯಲ್ಲಿ ಪಟ್ಟಿಮಾಡಿ ಅದರಲ್ಲಿ ಇಡೀ ಸತ್ಯವೇದದಿಂದ– ಕೀರ್ತನಾಗ್ರಂಥ, ಜ್ಞಾನೋಕ್ತಿಗಳು ಹಾಗೂ ಯೆಶಾಯನ ಗ್ರಂಥಂದಿಂದ ಶೇಖರಿಸಿ ಮಾನವನ ವಿಫಲತೆಯನ್ನು ತಿಳಿಸಿರುತ್ತಾನೆ.

ದುಃಖಕರವಾದ ಒಂದು ಸಂಗತಿಯೇನೆಂದರೆ, ಸತ್ಯವೇದದಲ್ಲೆಲ್ಲಾ ದೇವರ ಕಟ್ಟಳೆಗಳನ್ನೊಳಗೊಂಡ ದಾರಿಯಲ್ಲೇ ದೇವರ ನೇಮಗಳನ್ನನುಸರಿಸಿ ಸರಿಯಾದ ದಾರಿಯಲ್ಲಿ ನಡೆಯಲು ಯಾರೂ ಇಷ್ಟಪಡಲಿಲ್ಲ. ಬೇರಾವುದನ್ನಾದರೂ ಸರಿಯೇ! ಇಂದೂ ಹಾಗೆಯೇ ಅದಕ್ಕಿಂತಲೂ ಹೆಚ್ಚಾಗಿಯೂ ಇದೆ. ನಮ್ಮ ಸ್ವಂತ ದಾರಿಯಲ್ಲೆ ನಡೆಯಲು ಆಶಿಸುತ್ತೇವೆಯೇ ಹೊರತು ದೇವರ ಮಾರ್ಗದಲ್ಲಲ್ಲ.

## ಮಾರ್ಗ :

ಮೊದಲ ಶತಮಾನದಲ್ಲಿ ಕ್ರಿಸ್ತನ ಅನುಯಾಯಿಗಳಂತೆ ತೀರಾ ಬದಲಾದ ಮಾರ್ಗವನ್ನು ತೋರಿಸುವ ಉದ್ದೇಶವಾಗಿರಬಹುದು. ಅವರು 'ಆ ಮಾರ್ಗ'ದ ಬಗ್ಗೆ ವಾದಿಸುವವರಾಗಿರುವರೆಂದು ತಿಳಿದಿತ್ತು. ಈ ಪದವನ್ನು ಅಪೋಸ್ತಲರಕೃತ್ಯಗಳ ಗ್ರಂಥದಲ್ಲಿ ಅನೇಕ ಸ್ಥಳಗಳಲ್ಲಿ ನಾವು ನೋಡಬಹುದು. ಉದಾಹರಣೆಗೆ,

**"ಒಂದನ್ನು ಮಾತ್ರ ನಿನ್ನ ಮುಂದೆ ಒಪ್ಪಿಕೊಳ್ಳುತ್ತೇನೆ, ಅದೇನೆಂದರೆ–ಇವರು ಪಾಷಾಂಡಮತವೆಂದು ಹೇಳುವ ಮಾರ್ಗಕ್ಕನುಸಾರವಾಗಿ ನಾನು ನಮ್ಮ ಪಿತೃಗಳ ದೇವರನ್ನು ಸೇವಿಸುವವನಾಗಿದ್ದೇನೆ" (ಅಪೋಸ್ತಲರ ಕೃತ್ಯಗಳು 24:14).**

ಆದಿ ವಿಶ್ವಾಸಿಗಳು ತಮ್ಮನ್ನು ಕುರಿತು ಹೀಗೆ ವಿವರಣೆ ಕೊಡಲು ಕಾರಣವೇನಿತ್ತು? ಕಾರಣ ಅವರ ಜೀವಿತದಲ್ಲಿ ಅವರ ದಿಕ್ಕು ಈಗ ಬದಲಾಯಿಸಲ್ಪಟ್ಟಿತು. ಮೊದಲಿನಂತೆ ಗುಂಪನ್ನು ಹಿಂಬಾಲಿಸದೆ, ಪೂರ್ಣವ್ಯತ್ಯಾಸವಾದ ಮಾರ್ಗದಲ್ಲಿ ನಡೆಯಲು ಆರಿಸಿಕೊಂಡದ್ದೇ ಆಗಿರುತ್ತದೆ. ಅವರ ಒಲವನ್ನು ಪೂರ್ಣ ಬದಲಾಯಿಸಲು ಯಾರೋ ಒಬ್ಬರು ಬರಬೇಕಿತ್ತು. ಹೊಸದಾದ ಮಾರ್ಗದಲ್ಲಿ ಅವರು ಅಗ್ರಗಾಮಿಗಳಾಗಬೇಕಿತ್ತು. ದೇವರ ಬಲವಾದ ಪವಿತ್ರಾತ್ಮನಿಂದ ಕನ್ಯೆಮರಿಯಳ ಗರ್ಭದಲ್ಲಿ ಕರ್ತನಾದ ಯೇಸುಕ್ರಿಸ್ತನು ಹುಟ್ಟುವುದರ ಮೂಲಕ ಈ ಸಾಧನೆಯುಂಟಾಯಿತು. ಯೇಸುವು ಒಂದೇ ಒಂದು ಸಲವಾದರೂ ಪೂರ್ಣವಾದ ವಿಧೇಯತ್ವದಿಂದ ಹಿಂಜಾರಲಿಲ್ಲ. ಆತನು ಯಾವಾಗಲೂ ದೇವರ ಚಿತ್ತಕ್ಕೆ ಒಳಗಾಗಿ ಎಲ್ಲದರಲ್ಲಿಯೂ ವಿಧೇಯನಾದನು.



## ನವಜೀವನ ಮಾರ್ಗ :

ಎಲ್ಲರೂ ನಡೆದ ರೀತಿಯಲೇ– ಮನುಷ್ಯನ ದೃಷ್ಟಿಗೆ ಸರಿಯಾಗಿ ತೋರುವ ಮಾರ್ಗದಲ್ಲಿ ಕೆಳಗಡೆಗೇ ನಡೆಯದೆ ಯೇಸುವು ಜೀವಕ್ಕೆ ನಡೆಸುವ ಮೇಲಣ ದಾರಿಯಲ್ಲಿ ನಡೆದನು. ಆ ವಿಧದ ಮಾರ್ಗವು **"ನವಜೀವನ ಮಾರ್ಗ"** (ಇಬ್ರಿಯರಿಗೆ 10:20) ಎಂದು ಕರೆಯಲ್ಪಡುತ್ತದೆ. ಎಲ್ಲರೂ ನಡೆದು ಹೋದ ದಾರಿಗಿಂತ ಪೂರ್ಣ ಬೇರೆ ರೀತಿಯುದಾಗಿರುತ್ತದೆ. ನೀವು ಸುವಾರ್ತೆಗಳನ್ನು ಓದುವುದಾದರೆ ಯೇಸುವಿನ ಮಾತು ಮತ್ತು ಕ್ರಿಯೆಯನ್ನು ಕಂಡು ಬೇರೆ ಯಾವ ಮನುಷ್ಯನ ತೆರೆನಾಗಿಯೂ ಆತನಿರದೆ, ಯೇಸುವು ಒಬ್ಬ ನಿಜವಾದ ಅಸಾಧಾರಣ ವ್ಯಕ್ತಿಯಾಗಿ, ಪರಿಪೂರ್ಣವಾದ ಅಸಮಾನನಾಗಿ ಮಾನವನ ಚರಿತ್ರೆಯಲ್ಲೇ ಎಲ್ಲವನ್ನೂ ಸಾಧಿಸಿದನು.

ಆತನ ಶಿಷ್ಯರು ಆತನನ್ನು ಒಮ್ಮೆ ದೇವರು ಹೇಗಿರುತ್ತನೆಂದು ಕೇಳಿದ್ದಕ್ಕೆ, ಅತನು ತಾನು ಯಾವರೀತಿ ನಡಕೊಳ್ಳುತ್ತಿದ್ದೇನೆಂಬುದನ್ನು ಗಮನಿಸುವಂತೆ ಹೇಳಿದನು. ಹೀಗೆ ಅವರಿಗೆ ದೇವರು ಹೇಗಿರುತ್ತಾನೆಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿದನು. ಅವರ ಮಧ್ಯೆ ಯೇಸು ದೇವರ ಜೀವವಾಗಿ ಬಾಳಿದನು; **"ನಾನು ತಂದೆಯಲ್ಲಿದ್ದೇನೆ, ತಂದೆಯು ನನ್ನಲ್ಲಿದ್ದಾನೆ ಎಂದು ನೀವು ನಂಬುವುದಿಲ್ಲವೋ? ನಾನು ನಿಮಗೆ ಹೇಳುವ ಮಾತುಗಳನ್ನು ನನ್ನಷ್ಟಕ್ಕೆ ನಾನೇ ಆಡುವುದಿಲ್ಲ, ತಂದೆಯು ನನ್ನಲ್ಲಿದ್ದುಕೊಂಡು ತನ್ನ ಕ್ರಿಯೆಗಳನ್ನು ನಡಿಸುತ್ತಾನೆ. ನಾನು ತಂದೆಯಲ್ಲಿದ್ದೇನೆ, ತಂದೆಯು ನನ್ನಲ್ಲಿ ಇದ್ದಾನೆಂಬುವ ನನ್ನ ಮಾತನ್ನು ನಂಬಿರಿ, ಇಲ್ಲದಿದ್ದರೆ ಆ ಕ್ರಿಯೆಗಳನ್ನೇ ನೋಡಿ ನನ್ನ ಮಾತನ್ನು ನಂಬಿರಿ" (ಯೋಹಾನ 14:10–11).**

## ಒಂದೇ ಒಂದು ಮಾರ್ಗ :

ತಂದೆ ಮಗನಲ್ಲಿದ್ದ ಅಂಥಹ ಬಾಂಧವ್ಯವು ಒಬ್ಬರನ್ನೊಬ್ಬರು ಆಲಿಸುವಷ್ಟಿತ್ತು. ಒಬ್ಬನ ಕ್ರಿಯೆಯು ಮತ್ತೊಬ್ಬನ ಆಯ್ಕೆಯಾಗಿತ್ತು. ಅವರದ್ದು ಸ್ಥಿರ ಅನ್ಯೋನ್ಯತೆ, ಅದೇ ಅನ್ಯೋನ್ಯತೆ ನಮ್ಮನ್ನು ಕಾರ್ಯಸಾಧಿಸುವಂತೆ ಯೇಸುವು ಹೇಳಿದ ಅನ್ಯೋನ್ಯತೆಯಾಗಿದೆ. ಅದು ನಮ್ಮ ಜೀವಿತದ ಎಲ್ಲಾ ಸನ್ನಿವೇಶಗಳಲ್ಲಿ ದೇವರ ಚಿತ್ತಕ್ಕೊಳಗಾಗುವುದು (ಯೋಹಾನ 17:21 ನೋಡಿ).

ಯೇಸುವು ಒಮ್ಮೆ ತೋಮನಿಗೆ **"ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ, ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವುದಿಲ್ಲ" (ಯೋಹಾನ 14:6)** ಎಂದನು. ನಾವು ದೇವರ ರಾಜ್ಯದಲ್ಲಿ ನಿತ್ಯಜೀವವನ್ನು ಪಡೆಯಬೇಕಾದರೆ ಯೇಸುಕ್ರಿಸ್ತನೊಂದಿಗೆ ಸಂಭಂಧವನ್ನಿಟ್ಟುಕೊಂಡು ಆತನ ಮಾರ್ಗವನ್ನು ಹುಡುಕುವುದೇ ಆಗಿರುತ್ತದೆ. ಆತನನ್ನು ಶಿಲುಬೆಗೆ ಹಾಕಿಸಬೇಕೆಂದು ಆ ಗುಂಪು ಆರ್ಭಟ ಮಾಡಿದ್ದು ಅವರ ತಪ್ಪು ಇಂದೂ ಸಹ ಸ್ವಹಿತಕ್ಕಾಗಿ ಒಳ್ಳೆಯ ಸಮಯ ಸಂದರ್ಭವನ್ನು ತಮ್ಮ ಜೀವಿತದಲ್ಲಿ ಹುಡುಕುವ ಗುಂಪು ತಪ್ಪುಮಾಡುತ್ತಲಿದೆ, ನಾವು ಆರಿಸಿಕೊಳ್ಳಬೇಕಾದ ಮಾರ್ಗವು ಯೇಸುವು ಆರಿಸಿಕೊಂಡ ಮಾರ್ಗ ಅದು ಆತನ ಹೆಜ್ಜೆಜಾಡನ್ನು ಅನುಸರಿಸುವುದೇ.

# ರಾಣಿಯನ್ನು ಸ್ವಾಗತಿಸುವುದು :

ಹೆಚ್ಚು ಕಡಿಮೆ ಹತ್ತು ಲಕ್ಷಜನ ಸಂದರ್ಶಕರು, ತೇವವೂ ಮಂಜೂ ತುಂಬಿದ್ದ ಒಂದು ದಿನದಲ್ಲಿ ಸೌತಾಂಪ್ಟನ್ ಬಂದರಿನಲ್ಲಿ ಮೇರಿ ರಾಣಿ 2 ಎಂಬ ಹಡಗನ್ನು ಸ್ವಾಗತಿಸಲು ಕಾದಿದ್ದರು.

ಬ್ರಿಟೀಷರ ಧ್ವಜವು ಹಾರಾಡುತ್ತಿರುವ ಆ ಮೇರಿರಾಣಿ 2 ಹಡಗು ಆಳವಾದ ಸಮುದ್ರದಲ್ಲಿ ಸಂಚರಿಸಬಲ್ಲ ಅತಿದೊಡ್ಡ ಹಡಗು, 1,50,000ಟನ್ ಭಾರವುಳ್ಳ ಈ ಹಡಗು 345 ಮೀಟರ್ ಉದ್ದವಾಗಿದ್ದು 2,600 ಜನ ಪ್ರಯಾಣಿಕರು ಹತ್ತಿ ಪಯಣಿಸುವ ಈ ಹಡಗನ್ನು ಕಟ್ಟಿಮುಗಿಸಲು 550 ಮಿಲಿಯನ್ ಪೌಂಡುಗಳು ಖರ್ಚಾಯಿತು. ಅದನ್ನು ಒಂದು ಹಡಗು ಎಂಬುದಾಗಿ ಕರೆಯುವುದಕ್ಕಿಂತ “ತೇಲಾಡುವ ಪಟ್ಟಣ”ವೆಂಬುದಾಗಿ ಹೇಳಿದರೆ ಅದಕ್ಕೆ ಅನ್ವಯವಾಗುತ್ತದೆ.

## ಎಲ್ಲವೂ ಒಂದರಂತೆಯೇ ಮತ್ತೊಂದಿದೆ

ಮೇಲೆ ಹೇಳಿದ ಅಧಿಕವಾದ ಅಳತೆಗಳು, ತೂಕಗಳೂ ನಿಮಗೆ ಅಭ್ಯಾಸವಾಗಿಲ್ಲದಿದ್ದರೆ ಅವುಗಳ ಮುಖ್ಯತ್ವದ ಬಗ್ಗೆ ನೀವು ಗಮನಹರಿಸಲಾರಿರಿ. ಈ ಹಡಗಿನ ಚಿತ್ರದಿಂದ ಇದು ಎಷ್ಟು ದೊಡ್ಡದಿದೆ ಎಂಬುದನ್ನು ಸುಮಾರಾಗಿ ಹೇಳಬಹುದು. ಆದ್ದರಿಂದ ಕುನಾರ್ಡ್ ಎಂಬ ಹಡಗಿನ ವಾರಸುದಾರರು ನಮಗೆ ಇದನ್ನು ಹೀಗೆ ವಿವರಿಸಲು ಸಹಕರಿಸುತ್ತಾರೆ, *ಐಫೆಲ್ ಗೋಪುರದ ಎತ್ತರಕ್ಕಿಂತ ಈ ಹಡಗವು 100 ಅಡಿ ಉದ್ದವಾಗಿದೆ, ಇದನ್ನು ನಯಗಾರ ಜಲಪಾತದ ಕೆಳಗಡೆ ತೇಲಾಡಿಸಿದರೆ ಅದು ನೀರು ಬೀಳುವ ತುಟ್ಟತುದಿಗಿಂತ 20 ಅಡಿ ಎತ್ತರಕ್ಕಿರುತ್ತದೆ, ಹಡಗಿನ ವಿಶಲ್ ನ ಶಬ್ದವು 10 ಮೈಲು ದೂರಕ್ಕೆ ಕೇಳಿಸುತ್ತದೆ.*

## ಎಲ್ಲವೂ ಸಿಗುತ್ತದೆ

ನೀವು ಈ ಹಡಗಿನ ಪ್ರಥಮ ಪ್ರಯಾಣವು ಬಿಡಲ್ಪಡುವಾಗ ಸೌತಾಂಪ್ಟನ್ ನಿಂದ ಫ್ಲಾರಿಡಾಕ್ಕೆ ಹೋಗಲು ಬಯಸಿ ಅದಕ್ಕೆ ಬೇಕಾದ ಟಿಕೆಟ್ಟಿನ ಹಣವನ್ನು ಇಟ್ಟಿದ್ದರೆ, ನಿಮಗೆ ಬೇಕಾದದ್ದೆಲ್ಲವೂ ಹಡಗಿನಲ್ಲೇ ಸಿಗುತ್ತದೆ. ಅದಕ್ಕಿಂತ ಅಧಿಕವಾಗಿಯೂ ಸಿಗುವುದು. ಅದರಲ್ಲಿ 1300 ಕೋಣೆಗಳ





ಜೊತೆಗೆ ಆಹಾರ ಸೇವಿಸುವ ಅಂಗಡಿಗಳು, ಆರೋಗ್ಯ ಕೇಂದ್ರ, ಐದು ಈಜುಕೊಳಗಳೂ, ದೇಹಾಭ್ಯಾಸದ ಕೇಂದ್ರವೂ, ಸಿನಿಮಾ, ಸೌರವ್ಯೂಹದ ಮಾದರಿಯ ಕೇಂದ್ರ, ಅಲ್ಲದೆ ಪ್ರಯಾಣಿಕರು ಆಡಂಬರದಿಂದ ಪ್ರಯಾಣಮಾಡುವಾಗ ಸಂತೋಷದಿಂದಿರಲು ಬೇಕಾದ ವಿಶ್ರಾಂತಿ ಸಮಯವು ಸಿಗುವುದನ್ನು ಧೃಡಪಡಿಸಲು ಅಗತ್ಯವಾದ ಎಲ್ಲಾ ಸಿದ್ಧತೆಗಳೂ ಇವೆ. ಗಣಕಯಂತ್ರದ ಚಮತ್ಕಾರ, ಭಾಷೆಗಳು, ಕಲೆಗಳು, ಅಡುಗೆ ಮುಂತಾದ ಹಲವಾರು ಪಾಠಗಳನ್ನು ಉತ್ತಮವಾಗಿ ಕಲಿಸಿಕೊಡಲು ಅಗತ್ಯವಾದ ಸಮುದ್ರದ ಕಾಲೇಜು ಮುಂತಾದ ಹಲವಾರು ಕಾರ್ಯಕ್ರಮಗಳು ಈ ಹಡಗಿನಲ್ಲಿ ನಡೆಯುತ್ತವೆ. ರಾಣಿಮೇರಿ 2ನಲ್ಲಿ ಒಂದು ದೊಡ್ಡ ಪುಸ್ತಕ ಭಂಡಾರವೂ, ಒಂದು ಪುಸ್ತಕದ ಅಂಗಡಿಯೂ ಇದೆ. ಒಂದು ನಿಜವಾದ ನಾಟ್ಯಶಾಲೆಯೂ, ಸಂಗೀತವೃಂದವೂ ಸಿದ್ದವಾಗಿರುವುದರ ಬಗ್ಗೆ ಹೆಮ್ಮೆ ಹೊಂದಿರುತ್ತದೆ, ಹಲವಾರು ಶಾರೀರಿಕಯೋಗ್ಯತೆ ಹಾಗೂ ಅನೇಕ ಆರೋಗ್ಯ, ವಿಶ್ರಾಂತಿ ಇಂಥವುಗಳ ಕೇಂದ್ರಗಳೂ ಇವೆ.

## ಒಂದರ ಅಗತ್ಯವಿದೆ

ಕೆಲವಾರು ಸಮಯಗಳಲ್ಲಿ ನಾವು ಸ್ವಲ್ಪ ನಿಂತು ನಮ್ಮ ಸ್ವಂತ ಜೀವಿತವನ್ನು ಕುರಿತು ಯೋಚಿಸಿ ನೋಡಬೇಕಾಗಿದೆ. ಮೇರಿರಾಣಿ ಹಡಗು ಸೌತಾಂಪ್ಟನ್ನಿಗೆ ಬಂದ ತಕ್ಷಣ ನಮಗೆ ಇಂಥಹ ಒಂದೇ ಸಂದರ್ಭವನ್ನು ನೀಡುತ್ತದೆ. ಮನುಷ್ಯನ ಸಂತೋಷ, ಮನಸ್ಸಿನ ತೃಪ್ತಿಗಾಗಿ ಯಾವುದೆಲ್ಲ ಮುಖ್ಯವೆಂದೆಣಿಸುತ್ತರೋ ಅಂಥವುಗಳೆಲ್ಲವನ್ನೂ ಒಳಗೊಂಡು ಈ ದೊಡ್ಡ ಹಡಗಿನಲ್ಲಿಟ್ಟಿದ್ದಾರೆ. ಹಡಗಿನ ಬಾಡಿಗೆಯನ್ನು ಕೊಟ್ಟು ಪ್ರಯಾಣವನ್ನು ಆನಂದಿಸಿ ಅನುಭವಿಸುವಂತೆ ಜನರು ಕೇಳಿಕೊಳ್ಳಲ್ಪಟ್ಟಿದ್ದಾರೆ, ಆದರೆ ಸಂತೋಷವೂ ಸಮೃದ್ಧಿಯೂ ಆದ ಜೀವಿತಕ್ಕೆ ಅಗತ್ಯವಾದದ್ದು ಇವುಗಳು ಮಾತ್ರವೋ?

ಯೇಸುವನ್ನೂ ಆತನ ಶಿಷ್ಯರನ್ನೂ ಒಂದು ಕುಟುಂಬವು ಆಹ್ವಾನಿಸಿ ಉಪಚರಿಸುತ್ತಿತ್ತು. ಇವರನ್ನು ಪ್ರೀತಿಯಿಂದ ಆಹ್ವಾನಿಸಿದ್ದ ಇಬ್ಬರು ಸಹೋದರಿಯರಿಗೆ ಕೈತುಂಬಾ ಕೆಲಸಗಳಿದ್ದವು. ಅತಿಥಿಗಳಿಗೆ ಆಹಾರ ತಯಾರಿಸುವುದು, ಇತರ ಸಿದ್ಧತೆಗಳನ್ನೂ ಗಮನಿಸಿಕೊಳ್ಳುವುದರಲ್ಲೂ ಈ ಇಬ್ಬರಲ್ಲಿ ಒಬ್ಬಳು ಮುಂದಾಗಿದ್ದಳು. ಅವಳ ಸಹೋದರಿಯು ಯೇಸುವಿನ ಪಾದಗಳ ಬಳಿಯಲ್ಲಿ ಕುಳಿತು, ಆತನು ಹೇಳುವುದನ್ನು ಕೇಳುತ್ತಾ, ಆತನಿಂದ ಕಲಿತುಕೊಳ್ಳುತ್ತಿದ್ದಳು. ಆದ್ದರಿಂದ ಮಾರ್ಥಳು ಯೇಸುವಿಗೆ ತನ್ನ ತಂಗಿಯ ಬಗ್ಗೆ ಎದುರಿಸಿ ಮರಿಯಳ ಸಹಾಯವು ತನಗೆ ಕೆಲಸಗಳನ್ನು ಮಾಡಲು ಅಗತ್ಯವೆಂದು ತಿಳಿಸಿದಳು. ಯೇಸುವು ***‘ಮಾರ್ಥಳೇ, ಮಾರ್ಥಳೇ ನೀನು ಅನೇಕ ವಿಷಯವಾಗಿ ಚಿಂತೆಯಲ್ಲಿಯೂ, ಗಡಿಬಿಡಿಯಲ್ಲಿಯೂ ಸಿಕ್ಕಿಕೊಂಡಿದ್ದೀ, ಕೆಲವು ಮಾತ್ರ ಬೇಕಾದದ್ದು ಅಥವಾ ಒಂದೇ, ಮರಿಯಳು ಆ ಉತ್ತಮ ಭಾಗವನ್ನು ಆರಿಸಿಕೊಂಡಿದ್ದಾಳೆ ಅದು ಆಕೆಯಿಂದ ತೆಗೆಯಲ್ಪಡುವುದಿಲ್ಲ’*** ಅಂದನು.

ಆತನು ಹೇಳಿರುವ ಮುಖ್ಯವಿಷಯವೆಂದರೆ ಯಾವಾಗಲೂ ಮಾಡುವಂತ ಕೆಲಸಗಳನ್ನು ಮಾಡಬೇಕಾಗಿದ್ದರೂ ನಾವೆಲ್ಲರೂ ಮಾಡಬೇಕಾದ ಮುಖ್ಯಕಾರ್ಯಗಳನ್ನು ಅಲಕ್ಷ್ಯಮಾಡಿ ಬಿಟ್ಟುಬಿಡಬಾರದೆಂಬುದೇ. ಆದರೆ ಕೆಲವರು ಮಾತ್ರವೇ ಮುಖ್ಯವಾದ ಕಾರ್ಯಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ಯೇಸು ಬಂದಿರುವ ಸಮಯದಲ್ಲಿ ಆತನೊಂದಿಗೆ ಸಮಯ

ಕಳೆದು ಆತನ ಬರೋಣದಿಂದ ಅನೇಕ ಆಶೀರ್ವಾದಗಳನ್ನು ಹೊಂದಿಕೊಳ್ಳಬೇಕು. ಎಷ್ಟುಸಾಧ್ಯವೋ ಅಷ್ಟನ್ನು ಆತನಿಂದ ಕಲಿತುಕೊಳ್ಳಬೇಕೆಂದು ಮರಿಯಳು ತಿಳಿದಿದ್ದಳು. ಆಕೆಯೂ ಅಡುಗೆಮನೆಯಲ್ಲಿ ಸಂಭ್ರಮದಿಂದ ಕೆಲಸಗಳನ್ನು ಮಾಡಿದ್ದಿರಬಹುದು, ಅಥವಾ ತನ್ನ ಆಳತೆಯಲ್ಲಿ ಒಂಟಿಯಾಗಿ ಸಂತೋಷಪಟ್ಟಿದ್ದಿರಬಹುದು. ಆದರೆ ಆಗಲೂ, ಈಗಲೂ ಯೇಸುವಿನಿಂದ ಕಲಿತುಕೊಳ್ಳಬೇಕಾದದ್ದು ಬಹಳ ಅವಶ್ಯವುಳ್ಳದ್ದಾಗಿಯೂ, ಪ್ರಾಮುಖ್ಯವುಳ್ಳದ್ದಾಗಿಯೂ ಇರುತ್ತದೆ.

## ರಾಜನು ಬರುತ್ತಿದ್ದಾನೆ

ರಾಜನು ತನ್ನ ಸ್ವಂತ ನಗರಕ್ಕೆ ಬರುವಾಗ, ಆತನನ್ನು ಹೊಗಳಿ ಆಹ್ವಾನಿಸಲು ಲಕ್ಷಕ್ಕಿಂತ ಹೆಚ್ಚು ಜನರು ಕೂಡಿರುತ್ತಾರೆ ಕರ್ತನಾದ ಯೇಸು ಕ್ರಿಸ್ತನು ಯೆರೂಸಲೇಮಿಗೆ ಬರಲಿದ್ದಾನೆ. ಅದರ ಗುರುತುಗಳೇನೆಂದರೆ, ಆ ಸಮಯದಲ್ಲಿ ಮಂಜಾಗಲೀ, ತೇವವಾಗಲೀ ಇರುವುದಿಲ್ಲ, ಒಂದು ಹೊಸದಿನವು ಉದಯವಾದಂತಿರುತ್ತದೆ. ಅನೇಕ ವರ್ಷಗಳಿಗಿಂತ ಮುಂಚೆ ದಾವೀದ ಅರಸನು ಅದನ್ನು ವರ್ಣಿಸಿರುತ್ತಾನೆ,

**“ಮೋಡಗಳಿಲ್ಲದ ಪ್ರಾತಃಕಾಲದಲ್ಲಿ ತೇಜೋಮಯನಾಗಿ ಉದಯಿಸಿ ....... ಸೂರ್ಯನಿಗೆ ಸಮಾನನಾಗಿದ್ದೀ” (2ಸಮುವೇಲ 23:4).**

**“ತನ್ನ ಪವಿತ್ರರ ಮೂಲಕ ಪ್ರಭಾವ ಹೊಂದುವವನಾಗಿಯೂ ನಾವು ನಿಮಗೆ ಹೇಳಿದ ಸಾಕ್ಷಿಯನ್ನು ನಂಬಿದವರೆಲ್ಲರ ಮೂಲಕ ತನ್ನ ವಿಷಯದಲ್ಲಿ ಆಶ್ಚರ್ಯ ಹುಟ್ಟಿಸುವವನಾಗಿಯೂ ಬರುವಾಗ ಅಂಥವರು ಕರ್ತನ ಸಮ್ಮುಖಕ್ಕೂ ಆತನ ಪರಾಕ್ರಮದ ವೈಭವಕ್ಕೂ ದೂರವಾಗಿ ನಿತ್ಯನಾಶನವೆಂಬ.........” (2ಥೆಸಲೋನಿಕದವರಿಗೆ 1:9).**

ಯೇಸುಕ್ರಿಸ್ತನು ಬರುವಾಗ, ಈ ಜೀವಿತಕ್ಕೆ ಯಾವುದು ನಿಜವಾದ ಅಗತ್ಯ ಎಂಬುದು ತಿಳಿದುಬರುತ್ತದೆ. ಸರ್ವಶಕ್ತನಾದ ದೇವರೊಟ್ಟಿಗೆ ಸರಿಯಾದ ಸಂಬಂಧವೂ, ಸಂಪರ್ಕವೂ ಇರಬೇಕು, ಕರ್ತನಾದ ಯೇಸುಕ್ರಿಸ್ತನಲ್ಲಿಡುವ ವಿಶ್ವಾಸದಿಂದಲೂ, ಆತನ ಆಜ್ಞೆಗಳಿಗೆ ವಿಧೇಯರಾಗುವುದರಿಂದಲೂ ಈಗ ಇದು ಸಾಧ್ಯವಾಗುತ್ತದೆ. ಆತನ ರಕ್ಷಿಸುವ ನಾಮದಲ್ಲಿ, ನೀರಿನಲ್ಲಿ ಮುಳುಗಿ ತೆಗೆದುಕೊಳ್ಳುವ ದೀಕ್ಷಾಸ್ನಾನವು ವಿಧೇಯತೆಯ ಕಟ್ಟಳೆಗಳಲ್ಲಿ ಒಂದಾಗಿದೆ.

ಪರಲೋಕದಿಂದ ಬರುವ ಪಟ್ಟಣ

ಹೊಸಒಡಂಬಡಿಕೆಯ ಕೊನೆಯ ಪುಸ್ತಕವಾದ ಯೇಸುಕ್ರಿಸ್ತನ ಪ್ರಕಟನೆಯ ಗ್ರಂಥದಲ್ಲಿಕರ್ತನಾದ ಯೇಸುವಿನ ಬರೋಣದ ಕುರಿತಾದ ನಡೆಯಲಿರುವ ಸಂಭವಗಳನ್ನು ಚಿತ್ರಗಳಂತೆ ತೋರಿಸುತ್ತದೆ. ದೇವರ ಮಹತ್ತಾದ ಉದ್ದೇಶವು ನೆರವೇರುವ ಕಾಲದಲ್ಲಿ, ದೇವರ ರಾಜ್ಯವು ಮತ್ತೆ ಈ ಲೋಕದಲ್ಲಿ ಸ್ಥಾಪಿತವಾಗುವ ವಿಧವನ್ನು ಯೋಹಾನನಿಗೆ ಹೇಳಿಯದೆ, ಬರಲಿರುವ ಬದಲಾವಣೆಗಳನ್ನು ಮಾತಿನ ಪಟಗಳಂತೆ ತೋರಿಸಿದೆ.

ದೇವರ ರಾಜ್ಯದಿಂದ ಮನುಷ್ಯರ ರಾಜ್ಯಗಳು ನೂಕಲ್ಪಡುವ ಕಾಲಕ್ಕೆ ದೇವರು ಚೆನ್ನಾಗಿ ಸಿದ್ಧಮಾಡಿಕೊಂಡಿದ್ದಾನೆ, ಆ ಸಂದರ್ಭವು ಲೋಕದ ಮಾನವಕುಲವು ಬಾಳಲು ಸಾಧ್ಯವಾಗುವಂತಹದು ಆಗಿರುತ್ತದೆ. ದೇವರ ಮಹಿಮೆಯು ಜಯಿಸುತ್ತದೆ, ಎಲ್ಲವೂ ಆತನಿಗೆ



ಘನವನ್ನೂ, ಸ್ತುತಿಯನ್ನೂ ಸಲ್ಲಿಸುತ್ತವೆ. ಆ ಬರೋಣದ ಸಮಯದಲ್ಲಿ ನಿತ್ಯಜೀವ ಹೊಂದುವುದು ದೈವೀಕ ಆಶೀರ್ವಾದಗಳನ್ನು ಹೊಂದಿಕೊಳ್ಳುವುದೂ, ಸ್ಥಿರವಾಗಿರುವುದೇ ಪರಲೋಕದ ಪಟ್ಟಣವಾಗಿರುವ **“ಹೊಸ ಯೆರೂಸಲೇಮ್”** ನಗರದ ಬರೋಣ ಎಂದು ವರ್ಣಿಸಲ್ಪಡುತ್ತದೆ.

**“........ ಹೊಸ ಯೆರೂಸಲೇಮು ಪರಲೋಕದಿಂದ ದೇವರ ಬಳಿಯಿಂದ ಇಳಿದು ಬರುವುದನ್ನು ಕಂಡೆನು, ಅದು ತನ್ನ ಗಂಡನಿಗೋಸ್ಕರ ಅಲಕೃತಳಾದ ಮದಲಗಿತ್ತಿಯಂತೆ ಶೃಂಗರಿಸಲ್ಪಟ್ಟಿತ್ತು. ಇದಲ್ಲದೆ ಸಿಂಹಾಸನದೊಳಗಿಂದ ಬಂದ ಮಹಾಶಬ್ಧವು ನನಗೆ ಕೇಳಿಸಿತು, ಅದು ಇಗೋ ದೇವರ ನಿವಾಸವು ಮನುಷ್ಯರಲ್ಲಿ ಅದೆ ಆತನು ಅವರೊಡನೆ ವಾಸಮಾಡುವನು. ಅವರು ಆತನಿಗೆ ಪ್ರಜೆಗಳಾಗಿರುವರು, ದೇವರು ತಾನೇ ಅವರ ಸಂಗಡ ಇರುವರು” (ಪ್ರಕಟನೆ 21:2–3).**

ಒಂದು ದೊಡ್ಡ ಹಡಗವು ಬಂದರಿನೊಳಕ್ಕೆ ಬರುವಂತೆ ನಮಗೆ ಅಗತ್ಯವಾದ ಸಕಲವನ್ನೂ ತೆಗೆದುಕೊಂಡು ದೇವರ ರಾಜ್ಯವು ಯೆರೂಸಲೇಮಿಗೆ ಒಂದುಸಾವಿರ ವರುಷಗಳ ಪರ್ಯಂತರ ಪ್ರಯಾಣವನ್ನು ಪ್ರಾರಂಭಿಸುತ್ತದೆ. ಆ ಸಂದರ್ಭದಲ್ಲಿ ನಮಗೆ ಗೊತ್ತಿರುವ ಎಲ್ಲವೂ ಸೋತುಹೋಗುತ್ತವೆ. ದೇವರು ಮಾತ್ರವೇ ತನ್ನ ಸೃಷ್ಟಿಯಲ್ಲಿ ಎಲ್ಲದಕ್ಕೆ ಎಲ್ಲವೂ ಆಗಿರುತ್ತಾನೆ. ರಾಜನನ್ನು ಆಹ್ವಾನಿಸಲು ಇದೇ ತಕ್ಕ ಸಂದರ್ಭವಾಗಿರುತ್ತದೆ.

## ವಿಧೇಯತೆ ಅಥವಾ ಒಳಗಾಗುವುದು
## (ಪ್ರತಿಬಿಂಬ)

ಪ್ರತಿ ವೈಯಕ್ತಿಕ ವ್ಯಕ್ತಿಯ ಹಕ್ಕುಗಳು ಪ್ರಥಮವಾದ್ದಾಗಿಯೂ, ಪ್ರಾಮುಖ್ಯತೆ ಹೊಂದಿದ್ದಾಗಿಯೂ ನಮ್ಮ ನವೀನ ಸಮುದಾಯದಲ್ಲಿ ಸ್ಥಾನ ಹಿಡಿದಿದೆ. ಮೊದಲನೆಯದಾಗಿ ಇದು ಅನೇಕ ಸಂದರ್ಭಗಳಲ್ಲಿ ಇದು ಹಾನಿಗೆ ಕಾರಣವಾಗಿದೆ. ಯೇಸುವಿಗೆ ಸೇವಕರಾಗಿ ನಾವು ಹೊಂದಿರಬೇಕಾದ ವ್ಯತ್ಯಾಸವಾದ ದೃಷ್ಟಿಯ ಬಗ್ಗೆ ಸ್ಪಷ್ಟವಾಗಿರತಕ್ಕದ್ದು.
ನಮ್ಮ ಗುಣಾತಿಶಯಗಳಿಗೆ ಆಧಾರಭೂತವಾದದ್ದು:

ನಮ್ಮ ರಾಜ್ಯವೂ ನಮ್ಮ ರಾಜನೂ ಇಂಥಹ ಕ್ರಮದಲ್ಲಿಲ್ಲ. ತಪ್ಪಾದ ಯೋಚನೆ ಹಾಗೂ ತಪ್ಪಾದ ಮನೋಭಾವನೆಗಳಲ್ಲಿ ಸಿಕ್ಕಿಕೊಳ್ಳದಂತೆ ನಾವು ಬಹುಜಾಗ್ರತೆಯುಳ್ಳವರಾಗಿ ನಮ್ಮನ್ನು ಕಾದುಕೊಳ್ಳಬೇಕು. ನಾವು ಮಾಡುವ ಪ್ರತಿಯೊಂದರಲ್ಲೂ ನಮ್ಮ ಕೆಲಸದ ಸ್ಥಳಗಳಲ್ಲಾದರೂ, ಸತ್ಯಕ್ಕೆ ಸಂಬಂಧಿಸದೆ ಇರುವ ಸಂಧರ್ಭಗಳಾದರೂ, ಅಲ್ಲದಿದ್ದರೆ ನಮ್ಮ ಆತ್ಮಕ್ಕೆ ಸಂಬಂಧಿಸಿದ ಕುಟುಂಬವಾದರೂ ಸರಿ, ಹೇಗಿದ್ದರೂ ನಾವು ಹಿಂಬಾಲಿಸುವ ವೈಯಕ್ತಿಕ ತತ್ವಗಳು ಹಾಗೂ ದೃಷ್ಟಿಯನ್ನು ಹೊರಪಡಿಸುವ ರೀತಿಯಲ್ಲಿ ನಡಕೊಳ್ಳಬೇಕೆನ್ನುವುದು ನಮಗೆ ಗೊತ್ತು. ಇದು ಏನೋ ದೇವರಿಗಾಗಿ ಸಾಕ್ಷಿಗಳಗಿರಬೇಕೆಂಬುದು ಮಾತ್ರವಲ್ಲ, ಇದು ಜೀವಿತದ ಒಂದು ಮುಖ್ಯವಾದ ಭಾಗ ಎಂಬುದು ನಿಜವಾದಾಗ್ಯೂ ಇದು ಇನ್ನೂ ಆಳವಾದುದಾಗಿಯೂ ಹಲವು ಕಾರ್ಯಗಳನ್ನೊಳಗೊಂಡದ್ದೂ ಆಗಿದೆ. ಪೌಲನು ಹೇಳಿದಂತೆ,

**''ನಾವು ಬದುಕಿದರೆ ಕರ್ತನಿಗಾಗಿ ಬದುಕುತ್ತೇವೆ, ಸತ್ತರೂ ಕರ್ತನಿಗಾಗಿ ಸಾಯುತ್ತೇವೆ, ಬದುಕಿದರೂ ಸತ್ತರೂ ಕರ್ತನವರೇ'' (ರೋಮಾಪುರ 14:8).**

ನಾವು ಹೇಗೆ ಚಿಂತಿಸಬೇಕು, ನಡೆಯಬೇಕು ಎಂಬ ನ್ಯಾಯವೇನು? **''ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ'' (ಎಫೆಸ 5:21).** ನಾವು ವಿಶ್ವಾಸ ಕುಟುಂಬದಿಂದ ಮಾತ್ರ ನಾವು ನಮ್ಮ ನಡತೆಯನ್ನು ಈ ವಚನಕ್ಕನುಗುಣವಾಗಿ ಇರೋಣವೆಂಬದಾಗಿ ಕಟ್ಟಳೆಯನ್ನು ಒಂದು ಚೌಕಟ್ಟಿನಲ್ಲಿ ಮಾತ್ರ ಉಪಯೋಗಿಸಲು ಪ್ರಯತ್ನಿಸಬೇಕು. ಆದರೆ ಹೊಸಒಡಂಬಡಿಕೆಯನ್ನು ಬರೆದಿರುವವರಾದರೋ ಈ ಕಟ್ಟಳೆಗಳನ್ನು ಇನ್ನೂ ವಿಶಾಲಗೊಳಿಸಬಹುದು ಎನ್ನುತ್ತಾರೆ; *ಅರಸರು (ನಾವು ಕಟ್ಟುನಿಟ್ಟಾಗಿ ಏನನ್ನೂ ಮಾಡಲಾಗದು, ದುಷ್ಟ ಅರಸನಾದ ನೀರೋ ಮುಂತಾದವರು ಆಳುತ್ತಿದ್ದ ಕಾಲದಲ್ಲಿ ಪೌಲನು ಹೀಗೆ ಬರೆಯುತ್ತಾನೆ. ಈ ಕಾಲದ ಅರಸರು ಎಷ್ಟೋ ಕೆಟ್ಟುಹೋಗಿರುತ್ತಾರೆ)*; ನಮ್ಮನ್ನು ಕೆಲಸದಲ್ಲಿರಿಸಿರುವವರು(ಈ ದಿನಗಳಲ್ಲಿ ಯಜಮಾನ–ಸೇವಕ ಎಂಬ ಸಮಾನತೆ); ಮತ್ತು ಸತ್ಯವನ್ನು ಕೈಕೊಳ್ಳದ ಗಂಡಂದಿರು, ಇತ್ಯಾದಿ ಮನುಷ್ಯರಿಗೆ ವಿಧೇಯವಾಗಿರುವುದಕ್ಕಿಂತಲೂ ದೇವರಿಗೆ ವಿಧೇಯರಾಗಿರುವುದು ಅವಶ್ಯವಾದದ್ದು(ಅಪೋಸ್ತಲರ ಕೃತ್ಯಗಳು 5:29) ಎಂಬ ಪೇತ್ರನ ಮಾತಿನಂತೆ ಈ ಮಾತನ್ನು ನಾವು ಜ್ಞಾಪಿಸಿಕೊಂಡರೂ ಅದನ್ನು ಸರಿಯಾದ ಸಂದರ್ಭದಲ್ಲಿಯೇ ಉಪಯೋಗಿಸಬೇಕು. ದೇವರ ಕಟ್ಟಳೆಗಳನ್ನು ಕೈಬಿಟ್ಟು ಲೋಕದ ಕಟ್ಟಳೆಗಳನ್ನು ಹಿಂಬಾಲಿಸುವಂತೆ ಕೇಳಿಕೊಳ್ಳಲ್ಪಟ್ಟಾಗ ಪೇತ್ರನು ಹೇಳಿದ್ದನ್ನು ಕೈಗೊಂಡು ನಡೆಯಬೇಕು.

## ವಿಧೇಯತೆ ಪ್ರಸಿದ್ಧವಾಗಿಲ್ಲ

ವಿಧೇಯತೆ ಅಥವಾ ವಿನಯವುಳ್ಳವರಾಗುವುದು ಎಂಬ ತತ್ವವು ನವೀನ ಸಮುದಾಯದಲ್ಲಿ ತಳ್ಳಲ್ಪಟ್ಟ ಒಂದಾಗಿದೆ. ನಾವೂ ಸಹ ಈ ತತ್ವದಂತೆ ಒಂದನ್ನೂ ಮಾಡದೆ ಕುಳಿತುಕೊಂಡು ಇತರರ ಒಳಿತುಗಳಮೇಲೆ ಹತ್ತಿ ತುಳಿಯಲು ಅನುಮತಿಸುತ್ತೇವೆ. ಇಲ್ಲವಾದರೆ ಇದು ಸತ್ಯಕ್ಕೆ ಪರಿಪೂರ್ಣವಾದ ವಿರುದ್ಧಪದವಾಗಿರುತ್ತದೆ. ನಿಜವಾಗಿ ವಿಧೇಯತೆ ಎಂಬ ಸ್ಥಿತಿಯಲ್ಲಿ ನಾವು ಹೇಗೆ ಯೋಚಿಸುವುದು, ಹೇಗೆ ನಡೆಯುವುದು ಎಂದು ನಾವೇ ಆರಿಸಿಕೊಳ್ಳುತ್ತೇವೆ, ಹೀಗೆ ಪ್ರೀತಿಯ ಆತ್ಮನಿಂದ ಆರಿಸಿಕೊಳ್ಳುತ್ತೇವೆ.

**''........ತೀರ್ಮಾನಿಸಿಕೊಳ್ಳಿರಿ......ಸಾಧಿಸಿಕೊಳ್ಳೋಣ'' (ರೋಮಾಪುರ 14:13, 19).** ಪೇತ್ರನು ತನ್ನ ಮೊದಲನೆಯ ಪತ್ರಿಕೆಯಲ್ಲಿ ನಾವೇ ಇತರರಿಗೆ ವಿಧೇಯರಾಗಲು ತೀರ್ಮಾನಿಸುತ್ತೇವೆ, ನಾವು ಜೀವಿತದಲ್ಲಿ ಕಷ್ಟವಾದ ಸಂದರ್ಭಗಳಲ್ಲೂ ಸಹ ನಮ್ಮ ಮೇಲಧಿಕಾರಿ ನಮ್ಮ ಮೇಲೆ ಕಠಿಣವಾಗಿ ಎದುರಿಸಲು ತೀರ್ಮಾನ ಮಾಡುತ್ತಾನೆ. ಸ್ಥಳೀಯ ಅಧಿಕಾರಿಯು ಒಂದು ಮಿತವನ್ನು ಮೀರಬಾರದೆಂದು ಯಾರೂ ಕೈಕೊಳ್ಳಲಾಗದ ಆಜ್ಞೆಯನ್ನು ಹಾಕುತ್ತಾನೆ(ಅದನ್ನು ಯಾರೂ ತಡೆಹಿಡಿಯುವುದಿಲ್ಲ) ಸರ್ಕಾರವು ಒಂದು ದೊಡ್ಡ ಮೊತ್ತವನ್ನು ನಮ್ಮಮೇಲೆ ತೆರಿಗೆಯಾಗಿ ಹಾಕುತ್ತದೆ, ನಮ್ಮೊಡನೆ ಕೆಲಸ ಮಾಡುವವರು ನಮ್ಮ ಕೆಲಸಮಾಡುವವರು ನಮ್ಮ ಕೆಲಸ



ಅಥವಾ ನಡತೆಯ ಬಗ್ಗೆ ಮೇಲಧಿಕಾರಿಗೆ ದೂರು ಕೊಡುತ್ತಾರೆ. ಒಬ್ಬಳ ಗಂಡನು ಆಕೆಯ ಇಷ್ಟಕ್ಕೆ ವಿರೋಧವಾಗಿ ತೀರ್ಮಾನಿಸುತ್ತಾರೆ.

ವಿಧೇಯತೆ ಅಥವಾ ವಿನಯವುಳ್ಳವರಾಗಿರುವುದು ಎಂಬ ತತ್ವವು ತಗ್ಗಿಸಿಕೊಳ್ಳುವುದೆಂಬ ತತ್ವದೊಡನೆ ಹೊಂದಿಕೊಂಡಿರುತ್ತದೆ. ಅದು ಇತರರೊಡನೆ ನಾವು ನಡೆಸುವ, ಸಂಪರ್ಕಿಸುವಾಗ ಇರುವ ಒಳಗಿನ ತಾಳ್ಮೆಯ ಮನೋಭಾವವನ್ನು ಇತರರಿಗೆ ವಿಧೇಯರಾಗಿರಿ ವಿನಯವುಳ್ಳವರಾಗಿ ಮಾಡುವ ಕಾರ್ಯಗಳನ್ನೂ, ತಂದೆಯೊಡನೆಯೂ, ನಮ್ಮ ಕರ್ತನಾದ ಯೇಸುವಿನೊಡನೆ ಇರುವ ನಮ್ಮ ಸಂಪರ್ಕಗಳಲ್ಲಿ ಇಂಥಹ ತತ್ವಗಳು ಕ್ರಿಯೆಯಲ್ಲಿ ಬರುವವರೆಗೆ ನಾವು ಕಲಿಯುತ್ತೇವೆ. ತಾಳ್ಮೆಯ ಮನೋಭಾವವನ್ನು ಹೊಂದಿಕೊಂಡಿದ್ದರೆ, ನಾವಾಗಿ ಮುಂದೆ ಬಂದು ದೇವರ ಚಿತ್ತಕ್ಕೆ ನಮ್ಮ ಜೀವಿತದಲ್ಲಿ ವಿಧೇಯರಾಗಿರುವಾಗ, ಅದರಂತೆಯೇ ಇತರರೊಡನೆಯೂ ನಡಕೊಳ್ಳುವ ಸ್ಥಿತಿಗೆ ಸಿದ್ಧರಾಗುತ್ತೇವೆ.

## ಗುಣುಗುಟ್ಟುವುದರ ಕಾರಣಗಳು:

ನಮ್ಮೊಬ್ಬಬ್ಬರಿಗೂ ತಕ್ಕಂಥ ಒಂದನ್ನು ಪೌಲನು ಫಿಲಿಪ್ಪಿಯವರಿಗೆ 2:14–15ರಲ್ಲಿ ಹೇಳಿದ್ದಾನೆ, **''ಗುಣಗುಟ್ಟದೆಯೂ, ವಿವಾದವಿಲ್ಲದೆಯೂ ಎಲ್ಲವನ್ನೂ ಮಾಡಿರಿ, ಹೀಗೆ ನೀವು ನಿರ್ದೋಷಿಗಳೂ, ಯಥಾರ್ಥಮನಸ್ಸುಳ್ಳವರೂ ಆಗಿದ್ದು ವಕ್ರಬುದ್ಧಿಯುಳ್ಳ ಮೂರ್ಖಜಾತಿಯ ಮಧ್ಯದಲ್ಲಿ ದೇವರ ನಿಷ್ಕಳಂಕರಾದ ಮಕ್ಕಳಾಗಿರುವಿರಿ''**

ತಾಳ್ಮೆಯಿಂದಿರುವ ಮನೋಭಾವಕ್ಕೂ, ವಿಧೇಯತೆಯಿಂದ ಮಾಡುವ ಕಾರ್ಯಗಳಿಗೂ ಎಷ್ಟು ತದ್ವಿರುದ್ಧವಾಗಿಯೂ, ತಪ್ಪುಹೇಳಿಕೊಂಡು ಗುಣುಗುಟ್ಟುವುದು ಎಷ್ಟು ಸುಲಭವಾದದ್ದಾಗಿದೆ ಎಂದು ನಾವು ನೆನಸುತ್ತೇವೆ. ಹವಾಮಾನದ ಸ್ಥಿತಿಗಾಗಿ ಗುಣುಗುಟ್ಟುವುದು ಆಗಾಗ ನಡೆಯುತ್ತದೆ. ನಾವು ಒಪ್ಪಿಕೊಳ್ಳದ ಒಂದನ್ನು ಒಬ್ಬರು ಮಾಡಿದ್ದು ಅಥವಾ ನಾವು ಮರ್ಯಾದೆಯಿಂದ ನಡೆಸಲಪಡಲಿಲ್ಲವೆಂಬುದನ್ನು ನೆನಪುಮಾಡುವ ಸಂದರ್ಭಗಳು, ವೇದಪಾಠದ ಭಾಷಣದ ವಿವಿಧ ಕುರಿತು ಹೀಗೆ ನಾವು ಹೇಳುತ್ತಲೇ ಹೋಗಬಹುದು. ನೀವು ಇಂತಹ ಅನೇಕ ಉದಾಹರಣೆಗಳನ್ನು ಕೊಡಬಹುದು, ಹೀಗೆ ನಾವು ನಡಕೊಳ್ಳುವಾಗ ನಾವು ನಿಜವಾಗಿ ಲೋಕದಲ್ಲಿನ ಇತರರಿಗಿಂತ ವ್ಯತ್ಯಾಸವಾದವರಲ್ಲ ಎಂದು ಹೊರಪಡಿಸಿಕೊಳ್ಳುತ್ತೇವೆ. ಒಂದು ವೇಳೆ, ಗುಣುಗುಟ್ಟಿದ ಇಸ್ರಾಯೇಲ್ಯರು ಸಂಹಾರಕದೂತನ ಕೈಯಿಂದ ನಾಶವಾದಂತೆ ನಾವೂ ನಾಶವಾಗುವ ಸ್ಥಿತಿಗೆ ಬರುತ್ತೇವೆ(1ಕೊರಿಂಥ 10:10).

## ವಿಶ್ವಾಸಿಯು ವಿಭಿನ್ನವಾಗಿರಬೇಕು

ನಮ್ಮ ಇಷ್ಟಕ್ಕೆ ತಕ್ಕಂತೆ ಕಾರ್ಯಗಳು ಜರುಗಲಿಲ್ಲ ಅಥವಾ ನಮ್ಮ ದಾರಿಯಲ್ಲಿ ಅವು ಬರಲಿಲ್ಲ ಎಂಬುದರ ಜತೆ, ಹೆಮ್ಮೆಯೂ ಸ್ವಹಿತವೂ ಕುತಂತ್ರದಿಂದ ತಲೆಯೆತ್ತುತ್ತದೆ. ನಾವು ನಮ್ಮ ಗುರಿಯನ್ನು ನೋಡಿ, ಮುನ್ನಡೆಯುವ ಕೊನೆಯನ್ನು ಕಳಕೊಳ್ಳುತ್ತೇವೆ. ನಮ್ಮ ಸುತ್ತಲೂ




ಇರುವವರು ನಮ್ಮ ಮನೋಭಾವಕ್ಕೂ ಅವರ ಮನೋಭಾವಕ್ಕೂ ಯಾವ ವ್ಯತ್ಯಾಸವನ್ನೂ ನೋಡಲಾಗುವುದಿಲ್ಲ. ನಮ್ಮ ಜೀವಿತದಲ್ಲಿ ದೇವರು ಕೊಟ್ಟಿರುವವುಗಳಿಗಾಗಿ ಕೃತಜ್ಞತೆಯಿಂದಿರುವ ಬದಲು ದಿಕ್ಕನ್ನು ಬದಲಾಯಿಸಿಕೊಂಡೆವು. ಮೋಸಕರವಾದ ಸಂದರ್ಭಗಳಲ್ಲೂ ಸಹ ಆತನ ಕೃಪೆಯನ್ನು ನಾವು ನೆನಪು ಮಾಡಿಕೊಳ್ಳಬೇಕು. ನಾವು ತಾಳ್ಮೆಯ ಆತ್ಮನಿಂದ ತುಂಬಿದವರಾಗಿ ಆತನ ಚಿತ್ತಕ್ಕೆ ನಾವು ವಿಧೇಯರಾಗಿ ವಿನಯದಿಂದಿರಬೇಕು. ಚಿಕ್ಕ ಪುಟ್ಟ ನಿರಾಶೆಗಳು ಸರಿಯಿಲ್ಲದ ಹವಾಗುಣಗಳಲ್ಲೂ ಸಹ ನಾವು ಆತ್ಮೀಕ ಬೆಳವಣಿಗೆಗಾಗಿ ಏನನ್ನು ಕಲಿತುಕೊಳ್ಳುತ್ತೇವೆ ಎಂದು ನಮ್ಮನ್ನು ನಾವೇ ಕೇಳಿಕೊಳ್ಳಬೇಕು. ತಾಳ್ಮೆ ಮತ್ತು ವಿಧೇಯತೆಯಿಂದ ವಿನಯವುಳ್ಳವರಾಗಿರುವುದು ಎಂಬ ತತ್ವಗಳು ನಿಜವಾಗಿಯೂ ನಮ್ಮ ಅನುದಿನದ ಜೀವಿತದಲ್ಲಿ ಅನುಸರಿಸಲು ಬಹಳ ಕಷ್ಟಕರವಾದದ್ದೇ, ಯಾಕಂದರೆ ನಾವು ಪಾಪದಿಂದ ಕೂಡಿದ ಮನುಷಿಕ ಸ್ವಭಾವದ ದಾರಿಗಳಲ್ಲಿ ನಡೆದು ನಮ್ಮ ಹಕ್ಕುಗಳಿಗಾಗಿ ನಿಲ್ಲಲು ಆಶಿಸುತ್ತೇವೆ.

ನಾವು ಹಿಂಬಾಲಿಸಲೂ, ಕಲಿತುಕೊಳ್ಳಲೂ ಸತ್ಯವೇದದ ಎಷ್ಟೆಷ್ಟೋ ಉದಾಹರಣೆಗಳಿವೆ. ಅವುಗಳಲ್ಲಿ ಮಹತ್ತಾದವನು ಕರ್ತನಾದ ಯೇಸುವೇ. **ಆತನು ವಿಧೇಯತೆಯಿಂದ ತುಂಬಿದವನಾಗಿ, ತನ್ನನ್ನು ತಾನೇ ತಗ್ಗಿಸಿಕೊಂಡನು(ಫಿಲಿಪ್ಪಿ 2:8).** ಎಂಥಹ ಹೀನಸ್ಥಿತಿಯಲ್ಲೂ ಸಹ ದುಷ್ಟಮನುಷ್ಯರ ಕ್ರಿಯೆಗಳಿಗೆ ತನ್ನನ್ನೇ ಒಪ್ಪಿಸಿಕೊಟ್ಟು ಮೌನವಾಗಿದ್ದನು. ನಮ್ಮಲ್ಲಿ ಅನೇಕಮಂದಿ ಪಟ್ಟ ಕಷ್ಟಗಳಿಗಿಂತ ಅತಿ ಹೆಚ್ಚಾದ ಹೀನವಾದ ಕಷ್ಟಗಳು ಅವು, ಯಾಕಂದರೆ **ಆತನು ತಾನು ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು(ಇಬ್ರಿಯ 5:8).** ಆತನು ತಂದೆಯ ಚಿತ್ತದಂತೆ ವಿಧೇಯನಾಗಿ ವಿನಯವುಳ್ಳವನಾದನು, **"ನನ್ನ ಚಿತ್ತದಂತಲ್ಲ, ನಿನ್ನ ಚಿತ್ತದಂತೆಯೇ ಆಗಲಿ"** (ಲೂಕ 27:42).

**–ವೆಂಡಿ ಜಾನ್ಸ್‌ನ್**



# "ಸುಮ್ಮನೆ ನಿಂತು ದೇವರ ಅದ್ಭುತ ಕಾರ್ಯಗಳನ್ನು ಧ್ಯಾನಿಸು" (ಯೋಬ 37:14).

## ಕುದಿಯುವ ಸ್ಥಿತಿಯಲ್ಲಿನ ಉಷ್ಣ ಅನಿಲವನ್ನು ರಭಸವಾಗಿ ಹೊರಕ್ಕೆ ಹಾರಿಸುವ ಕುಂಬಾರ ಹುಳು

ಇಲ್ಲಿ ಕಂಡುಬರುವ ಕುಂಬಾರಹುಳು, ತನ್ನ ಬಾಲದ ಭಾಗದಲ್ಲಿರುವ ತನ್ನ ಎರಡು ಸುತ್ತುವ ಪೈಪುಗಳ(ಕೊಳವೆಗಳ) ಮೂಲಕ ತನ್ನ ವೈರಿಗಳ ಮೇಲೆ 212ಡಿಗ್ರಿ ಫ್ಯಾರನ್ ಹೀಟ್ ಉಷ್ಣವುಳ್ಳ, ದುರ್ವಾಸನೆ ತುಂಬಿದ ಅಪಾಯಕಾರಿ ಅನಿಲಗಳನ್ನು ರಭಸವಾಗಿ ಹೊರಬಿಡುತ್ತದೆ. ತನ್ನ ಹೊಟ್ಟೆಯ ಬೇರೆಬೇರೆ ಕೋಣೆಗಳಲ್ಲಿ ಹೈಡ್ರೋಜನ್ ಪರಾಕ್ಸೈಡ್ ಮತ್ತು ಹೈಡ್ರೋಕ್ವಿನೋನ್ ಅನಿಲಗಳನ್ನು ಶೇಖರಿಸಿಟ್ಟುರುತ್ತದೆ. ಸೇರಿಸಿಟ್ಟಿರುವ ರಸಾಯನಿಕ ಅನಿಲಗಳು ಶೇಖರಿಸಲ್ಪಟ್ಟ ಸ್ಥಿತಿಯಲ್ಲಿರುವಾಗ ಅನಿಲರೂಪದಲ್ಲಿ ಹೊರಗೆ ಹೋಗಿಬಿಡದಂತೆ ತಡೆಯಲು ಒಂದನ್ನು ಉಪಯೋಗಿಸುತ್ತದೆ.



ಇಂಥಹ ಒಂದು ಕೀಟ/ಹುಳು ತನ್ನ ಜೀವವನ್ನು ಕಾಪಾಡಿಕೊಳ್ಳಲಿಕ್ಕಾಗಿ ತಾನೇ ಇಂಥಹ ವ್ಯವಸ್ಥೆಯನ್ನು ಮಾಡಿಕೊಂಡಿದೆಯೆಂದು ನಂಬಲು ಸಾಧ್ಯವಿಲ್ಲ. ಎಷ್ಟೋ ಕೀಟಗಳು ತಮ್ಮ ಸ್ವರಕ್ಷಣೆಗಾಗಿ ಇಂತಹ ಕ್ರಮಗಳನ್ನು ರೂಪಿಸಿಕೊಂಡು ತಮ್ಮನ್ನು ಕಾಪಾಡಿಕೊಳ್ಳುತ್ತವೆ.

ಕುಂಬಾರ ಹುಳುವನ್ನು ನುಂಗಲು ಬಂದ ಇತರ ಕೀಟಗಳನ್ನು ಇದು ತಾನು ಶೇಖರಿಸಿಟ್ಟಿದ್ದ ಆ ರಾಸಾಯನಿಕ ಅನಿಲಗಳನ್ನು ತನ್ನ ಎರಡು ಕೊಳವೆಗಳ ಮೂಲಕ ಸರಿಯಾದ ಸಮಯಕ್ಕೆ ಮತ್ತೊಂದು ಅನಿಲವನ್ನು ಬಿಡುಗಡೆಮಾಡಿ, ಆ ತಡೆಯನ್ನು ತೆಗೆದು– ಆ ಅನಿಲವನ್ನು ಒಂದು ಕ್ಷಣದಲ್ಲಿ ಬೆರಸಿ, ಆ ತಡೆಗಳ ಕ್ರಿಯೆಯನ್ನು ಒಂದೇ ಕ್ಷಣದಲ್ಲಿ ಸೇರಿಸುತ್ತದೆ.



ಆದ್ದರಿಂದ ಈ ಎರಡು ರಾಸಾಯನಿಕ ಅನಿಲಗಳೂ ಬೇಗನೇ ಕ್ರಿಯೆ ನಡೆಸಿ, ಬುಭಕ್ಷಿಯನ್ನು ಎರಗಲು ಅಧಿಕವಾದ ಉಷ್ಣವೂ, ಶಬ್ದವೂ ಹೊರಬರುತ್ತದೆ. ಆ ಕೊಳವೆಗಳು ಸುತ್ತುತ್ತಿರುವುದರಿಂದ ಉಕ್ಕುವ ಆ ರಾಸಾಯನಿಕ ಅನಿಲವನ್ನು ಆಗುಂತುಕನ ಮೇಲೆ ಪ್ರಯೋಗಿಸುತ್ತದೆ. ಕೆಲವು ಬಗೆಯ ಕುಂಬಾರ ಹುಳುಗಳು ಇಂತಹ ಅನಿಲವನ್ನು ಸೆಕೆಂಡಿಗೆ 368–785 ಜೆಟ್ ವಿಮಾನದಷ್ಟು ವೇಗವಾಗಿ ಸುರಿಸುತ್ತವೆ.



ಇಂತಹ ಸ್ವರಕ್ಷಣಾ ಭಾಗಗಳು ಈ ರೀತಿಯ ಹುಳುಗಳ ಶರೀರದಲ್ಲಿ ಸೃಷ್ಟಿಸಲ್ಪಟ್ಟಿರುವ ರಕ್ಷಣಾ ಪ್ರಕ್ರಿಯೆಗೆ ಎಂಥ ವಿವರಣೆಯನ್ನೂ ಕೊಡಲಾಗುವುದಿಲ್ಲ, ಮತ್ತೆ ಹೇಳುತ್ತೇನೆ– ಇಂತಹ ಅದ್ಭುತವಾದ ಸೃಷ್ಟಿಯಲ್ಲಿ ಜ್ಞಾನಿಯಾದ ನಕ್ಷೆಗಾರನ ಕೈಚಳಕವು ಚೆನ್ನಾಗಿ ತಿಳಿದುಬರುತ್ತದೆ ಎಂಬ ಸತ್ಯಕ್ಕೆ ಯಾರೂ ಕಣ್ಣುಗಳನ್ನು ಮುಚ್ಚಿಕೊಳ್ಳಲಾಗದು. ಆದಿಕಾಂಡವು ಹೀಗೆ ತಿಳಿಸುತ್ತದೆ, ‘‘ದೇವರು ...... ಸಕಲವಿಧವಾದ ಜೀವಿಗಳನ್ನು ......... ಅವುಗಳ ಜಾತಿಗನುಸಾರವಾಗಿ ಉಂಟುಮಾಡಿದನು. ಆತನು ಅದನ್ನು ಒಳ್ಳೇದೆಂದು ನೋಡಿದನು’’

ಇಂತಹ ಹುಳುಗಳನ್ನು ಸೃಷ್ಟಿಸುವಾಗ ಯಾವ ಒಂದು ಪ್ರಯೋಗಶಾಲೆಯ ವಿಪತ್ತುಗಳೂ ಉಂಟಾಗಲಿಲ್ಲವೆಂಬುದು ನಿಜ. ಅವು ಅವುಗಳ ಶತೃಗಳನ್ನು ಮಾತ್ರವೇ ಎದುರಿಸುತ್ತವೆ.

**‘‘ಇಗೋ ಇವೆಲ್ಲವೂ ಆತನ ಮಾರ್ಗಗಳೇ, ಆದರೆ ಆತನ ವಿಷಯವಾಗಿ ಎಷ್ಟು ಕಡಿಮೆ ಕೇಳಿಸಿಕೊಳ್ಳುತ್ತಿವೆ.’’**



# ಅಂಜೂರದ ಮರದ ದೃಷ್ಟಾಂತವೂ ಮತ್ತು ಯೇಸುಕ್ರಿಸ್ತನ ಎರಡನೇ ಬರೋಣವೂ

ಬೇರೆಯ ದೃಷ್ಟಾಂತಗಳಿಗಿಂತ ಈ ದೃಷ್ಟಾಂತವು ಸ್ವಲ್ಪ ಬೇರೆ ರೀತಿಯಾಗಿ ಕಂಡುಬರುತ್ತದೆ. ಇದು ದೇವರ ರಾಜ್ಯದ ಕುರಿತಾದ ಕಾಲಾನುಕ್ರಮವಲ್ಲ ಹಾಗೂ ಯೇಸುವಿನ ಸನ್ಮಾರ್ಗ ಉಪದೇಶವೂ ಅಲ್ಲ, ಬದಲಾಗಿ ಇದರಲ್ಲಿ ಮೊದಲನೆಯದು ಕ್ರಿಯಾತ್ಮಕವಾಗಿದ್ದು, ಎರಡನೆಯ ಭಾಗವು ಆತನು ಹೇಳಿದ ಸಾಮ್ಯವಾಗಿಯೂ ಒಂದೇ ಸಂದೇಶವನ್ನೊಳಗೊಂಡ ಎರಡು ಭಾಗಗಳಾಗಿವೆ.

ಒಂದು ಸಮಯ ಯೇಸುವೂ ಆತನ ಶಿಷ್ಯರೂ ಯೆರೂಸಲೇಮಿಗೆ ಪ್ರಯಾಣ ಮಾಡುವಾಗ ನಡೆದದ್ದನ್ನು ಮತ್ತಾಯನು ಹೀಗೆ ಬರೆಯುತ್ತಾನೆ,

***‘‘ಆತನು ಪಟ್ಟಣಕ್ಕೆ ತಿರುಗಿ ಹೋಗುತ್ತಿರುವಾಗ ಹಸಿದನು, ದಾರಿಯಲ್ಲಿ ಒಂದು ಅಂಜೂರದ ಮರವನ್ನು ಕಂಡು ಅದರ ಹತ್ತಿರಕ್ಕೆ ಹೋಗಿ ಅದರಲ್ಲಿ ಬರೀ ಎಲೆಗಳನ್ನೇ ಹೊರತು ಮತ್ತೇನೂ ಕಾಣದೆ ಅದಕ್ಕೆ– ಇನ್ನುಮೇಲೆ ನಿನ್ನಲ್ಲಿ ಫಲವು ಎಂದೆಂದಿಗೂ ಆಗದೆ ಹೋಗಲಿ ಎಂದು ಹೇಳಿದನು’’ (ಮತ್ತಾಯ21:19).***



ಮೇಲ್ನೋಟದಲ್ಲಿ ನೋಡಿದರೆ ಯೇಸುವು ಹೀಗೆ ಹೇಳುವುದು ವಿನೋದವಾಗಿ ತೋರುತ್ತದೆ, ಹಾಗಿದ್ದರೂ ಈ ಸಂದರ್ಭವನ್ನು ಒಂದು ಕ್ರಿಯಾತ್ಮಕ ಸಾಮ್ಯವಾಗಿಯೂ ಅದರ ಎರಡನೆಯ ಭಾಗವು ಮುಂದೆ ನಡೆಯುವಂತದ್ದಾಗಿಯೂ ತಿಳುಕೊಂಡರೆ, ಬಚ್ಚಿಟ್ಟಿರುವ ಅದರ ಅರ್ಥವನ್ನು ನಾವು ಕಂಡುಕೊಳ್ಳಬಹುದು. ಬೆಳಿಗ್ಗೆ ಅವರು ಬರುತ್ತಿರುವಾಗ ಆ ಅಂಜೂರದ ಮರವು ಬುಡದಿಂದಲೂ ಒಣಗಿ ಹೋಗಿರುವುದನ್ನು ಕಂಡರು. ಆಗ ಪೇತ್ರನು ಹಿಂದಿನ ದಿನದ ಸಂಗತಿಯನ್ನು ನೆನಸಿಕೊಂಡು,

ಆತನಿಗೆ– ***‘‘ಗುರುವೇ, ಇಗೋ ನೀನು ಶಾಪಕೊಟ್ಟ ಅಂಜೂರದ ಮರವು ಒಣಗಿ ಹೋಗಿದೆ ಎಂದು ಹೇಳಿ.....’’ (ಮಾರ್ಕ 11:20–21).***

ಯೇಸುವಿನ ಈ ಕೆಲಸವನ್ನು ತಪ್ಪು ಹೊರಿಸುವಂಥದೆಂದು ವಿಮರ್ಶಿಸಲ್ಪಟ್ಟಾಗ್ಯೂ ಇದು

ಈಗ ನಮ್ಮ ಸಮಸ್ಯೆ0ಯಲ್ಲ. ಇನ್ನೂ ಆಳವಾಗಿ ನೋಡುವುದಾದರೆ, ಈ ಸಂದರ್ಭವು ಹೇಳುವಂತದ್ದಾದರೂ ಏನು? ದಾರಿಮಗ್ಗುಲಿನ ಅಂಜೂರದ ಮರವು ಇಸ್ರಾ0ಯೇಲ್ ದೇಶಕ್ಕೆ ಗುರುತಾಗಿದೆ, ಫಲವನ್ನು ಅಥವಾ ಫಲಬಿಡುವ ಗುರುತುಗಳನ್ನು ಎದುರುನೋಡಿ 0ಯೇಸು ತನ್ನ ಜನರ ಬಳಿಗೆ ಬಂದನು. ನಿಜವಾಗಿ ಅದರ ಅರ್ಥವೇನೆಂದರೆ, ತನ್ನ ಬರೋಣಕ್ಕಾಗಿ ಕಾದಿರುವಂತಹ ಜನರನ್ನು, ಒಳ್ಳೆ0ಯ ಗುಣಗಳನ್ನೂ ತಮ್ಮಲ್ಲಿ ತೋರ್ಪಡಿಸುವವರನ್ನೂ, ದೇವಭ0ಯವುಳ್ಳ, ಸತ್ಯಸಂಧರಾದ, ನಮ್ರತೆಯಿಂದಿರುವ ಜನರನ್ನು ಆತನು ಹುಡುಕಿ ಬಂದನು, ಆದರೆ ಅವರಲ್ಲಿ ಗರ್ವವೂ, ಅಹಂಕಾರವನ್ನು ಕಂಡನು. ದೇವಾಲ0ಯದ ಪ್ರಾಕಾರಗಳಲ್ಲಿ ದೇವರನ್ನು ಆರಾಧಿಸುವುದಕ್ಕೆ ಬದಲು, ಹಣವನ್ನು ಸಂಪಾದಿಸುವುದನ್ನು ಗುರಿ0ಯಾಗಿಟ್ಟುಕೊಂಡ ಜನರನ್ನು ನೋಡಿದನು. ಇಸ್ರಾ0ಯೇಲೆಂಬ ಮರದ ಬೇರುಗಳು ಮೊದಲೇ ಒಣಗಿಹೋಗಿದ್ದು ಹೆಚ್ಚುಕಡಿಮೆ ನಿರ್ಜೀವ ಸ್ಥಿತಿ0ಯೇ. ಇದನ್ನೇ ಮುಂದೆಬರುವ ಅಂಜೂರದ ಮರದ ಸಾಮ್ಯದಲ್ಲಿ ಆತನು ತಿಳಿಸಿದನು.

*''ಆದರೆ ದಂಡುಗಳು 0ಯೆರೂಸಲೇಮ್ ಪಟ್ಟಣಕ್ಕೆ ಮುತ್ತಿಗೆ ಹಾಕಿರುವುದನ್ನು ನೀವು ಕಾಣುವಾಗ ಅದು ಹಾಳಾಗುವ ಕಾಲ ಸಮೀಪವಾಯಿತೆಂದು ತಿಳುಕೊಳ್ಳಿರಿ. ಆಗ 0ಯೂದಾ0ಯದಲ್ಲಿರುವವರು ಬೆಟ್ಟಗಳಿಗೆ ಓಡಿಹೋಗಲಿ; ಆ ಪಟ್ಟಣದಲ್ಲಿರುವವರು ಅದರೊಳಗಿಂದ ಹೊರಟುಹೋಗಲಿ, ಹಳ್ಳಿ0ಯವರು ಅದರೊಳಕ್ಕೆ ಹೋಗದಿರಲಿ ..... ಅವರು ಕತ್ತಿ0ಯ ಬಾಯಿಗೆ ಬೀಳುವರು. ಅವರನ್ನು ಅನ್ಯದೇಶಗಳಿಗೆಲ್ಲಾ ಸೆರೆಹಿಡಿದುಕೊಂಡು ಹೋಗುವರು. ಅನ್ಯದೇಶದ ಸಮ0ಯಗಳು ಪೂರೈಸುವತನಕ 0ಯೆರೂಸಲೇಮ್ ಪಟ್ಟಣವು ಅನ್ಯದೇಶದವರಿಂದ ತುಳಿದಾಡಲ್ಪಡುತ್ತಿರುವುದು'' (ಲೂಕ 21:20, 21 ಮತ್ತು 24).*

ಈ ಮುನ್ನೆಚ್ಚರಿಕೆ0ಯ ಮಾತು ಮೂವತ್ತು ವರ್ಷಗಳೊಳಗೇ ನೆರವೇರಿಬಿಟ್ಟಿತು, ಹೇಗಂದರೆ ರೋಮ್ ಸೈನಿಕರು ನಗರವನ್ನು ಧಾಳಿಮಾಡಿ ನಾಶಪಡಿಸಿದರು, 0ಯೆಹೂದ್ಯರು ಲೋಕದಾದ್ಯಂತ ಚದರಿಸಲ್ಪಡುವಿಕೆ0ಯೂ ಆರಂಭವಾಯಿತು.

0ಯೆರೂಸಲೇಮಿನ ನಾಶನದ ಕುರಿತು ತನ್ನ ಎರಡನೇ ಬರೋಣದ ಕುರಿತು ಕರ್ತನು ಹೇಳಿದ ಮುನ್ನೆಚ್ಚರಿಕೆ0ಯ ಕೊನೆ0ಯಲ್ಲಿ ಅಂಜೂರದ ಮರದ ಸಾಮ್ಯವೂ ಎರಡನೇ ಭಾಗವಾಗಿದೆ.

*''ಆಗ ಮನುಷ್ಯ ಕುಮಾರನು ಬಲದಿಂದಲೂ ಬಹುಮಹಿಮೆಯಿಂದಲೂ ಮೇಘದಲ್ಲಿ ಬರುವುದನ್ನು ಕಾಣುವರು ...... ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದ್ದೇನೆಂದರೆ...... ಅಂಜೂರ ಮುಂತಾದ ಮರಗಳನ್ನು ನೋಡಿರಿ, ಅವು ಚಿಗುರಿದ ಕೂಡಲೇ ನೀವು ಅದನ್ನು ಕಂಡು ಈಗ ಬೇಸಿಗೆ0ಯು ಹತ್ತಿರವಾಯಿತೆಂದು ನೀವಾಗಿ ತಿಳಿಕೊಳ್ಳುತ್ತೀರಲ್ಲಾ, ಹಾಗೆ0ಯೇ ನೀವೂ ಸಹ ಇವುಗಳಾಗುವುದನ್ನು ನೋಡುವಾಗ ದೇವರ ರಾಜ್ಯವು ಹತ್ತಿರವದೆ ಎಂದು ತಿಳಿಕೊಳ್ಳಿರಿ'' (ಲೂಕ 21:27, 29–31).*

ಆದ್ದರಿಂದ, ಅಂಜೂರ ಮರದ ಬೆಳವಣಿಗೆ ಹೇಗಿದ್ದರೂ ಅತಿ ಶೀಘ್ರದಲ್ಲಿ ನಡೆ0ಯುವುದರಿಂದ



0ಯೇಸುಕ್ರಿಸ್ತನ ಎರಡನೇ ಬರೋಣದ ಗುರುತುಗಳೆಂದು ನಾವು ನಂಬಬಹುದು. ನಾವು ಮೊದಲೇ ನೋಡಿದಂತೆ, ಅಂಜೂರದ ಮರವು ಇಸ್ರಾ0ಯೇಲ್ ಜನರ ಗುರುತಾಗಿದ್ದರೂ ಅದರ ಬೆಳವಣಿಗೆ ನಿಶ್ಚ0ಯವಾಗಿದ್ದು ಇತರ ದೇಶಗಳೂ ತಮ್ಮತಮ್ಮ ಸ್ವಾತಂತ್ರ್ಯವನ್ನು ವ್ಯಕ್ತಪಡಿಸುವಾಗ– 0ಯೇಸುವಿನ ಎರಡನೇ ಬರೋಣವೂ ಸಮೀಪವಾಯಿತೆಂದು ನಾವು ನಿಶ್ಚ0ಯವಾಗಿ ನಂಬಬಹುದು.

ಈ ಶತಮಾನದ ಸಮಾಚಾರಗಳು ಮೇಲೆ ಚಿತ್ರಿಸಲ್ಪಟ್ಟಿರುವುದಕ್ಕೆ ಉತ್ತರಗಳಾಗಿವೆ. 0ಯೆಹೂದ್ಯರು ಹಲವಾರು ದೇಶಾಗಳಲ್ಲಿ ಚದರಿಹೋಗಿ, ಸುಮಾರು 2000 ವರ್ಷಗಳ ನಂತರ, ತಿರುಗಿ ತಮ್ಮ ದೇಶಕ್ಕೆ ಹಿಂತಿರುಗಿ ಬರುತ್ತಲಿದ್ದಾರೆ. 1948ರಲ್ಲಿ ಇಸ್ರಾ0ಯೇಲ್ ದೇಶವಾಯಿತೆಂದು ದೃಢೀಕರಿಸಿದರು. ಅಂದಿನಿಂದ ವಿಜ್ಞಾನದಲ್ಲಿ0ಯೂ, ತಾಂತ್ರಿಕ ಜ್ಞಾನದಲ್ಲಿ0ಯೂ ಮೇಲೇರುತ್ತಾ ಇತರ ಮುಂದುವರೆದ ದೇಶಗಳಿಗೆ ಸರಿಸಮಾನವಾಗಿ ನಿಂತಿದೆ. ಅಂಜೂರದ ಮರವಾಗಿರುವ ಇಸ್ರಾ0ಯೇಲ್ ಕಳೆದ ಶತಮಾನದಲ್ಲಿ ಒಂದು ಪ್ರಾಮುಖ್ಯ ಪುನರುಜ್ಜೀವನ ಹೊಂದಿದೆ, ಚಿಗುರುತ್ತಿರುವ ಕೊಂಬೆಗಳು **'ಮರವು'** ಇನ್ನೂ ಬೆಳೆ0ಯುತ್ತಿರುವ **''ವಸಂತ ಋತು''** ಎಂಬುದನ್ನು ದೇವರರಾಜ್ಯವು ಶೀಘ್ರದಲ್ಲಿ ಸ್ಥಾಪಿಸಲ್ಪಡುತ್ತದೆ ಎಂಬುದಕ್ಕೆ ಗುರುತಾಗಿದೆ.

ಹೀಗಿದ್ದರೂ 0ಯೇಸುವಿನ ಬರೋಣದೊಂದಿಗೆ ದೇವರರಾಜ್ಯ ಸ್ಥಾಪಿಸಲ್ಪಡುವಾಗ, ಹೊಸದಾಗಿ ನಿರ್ಮಿತವಾದ ಇಸ್ರಾ0ಯೇಲ್ ದೇಶವು ಮತ್ತೊಂದು ಸಾರಿ ಕೊನೆ0ಯದಾಗಿ ಅಳುವ ಸ್ಥಿತಿಗೆ ಬರುತ್ತದೆ. ಸತ್ಯವೇದದಲ್ಲಿನ ಪ್ರವಾದಿಗಳ ಮುಖಾಂತರ ಇಸ್ರಾ0ಯೇಲ್ ದೇಶದ ಅಕಸ್ಮಾತ್ತಾದ ಅಳುವ ಸ್ಥಿತಿ0ಯನ್ನು ಬಹಳ ಮುಂಚಿತವಾಗಿ0ಯೇ ತಿಳಿಸಲಾಗಿದೆ.

ಅವರ ಪಟ್ಟಣಗಳು ಹಿಡಿ0ಯಲ್ಪಟ್ಟು, ಅಲ್ಲಿ ವಾಸಿಸುವ ಜನರು ಸಂಹಾರವಾಗುವ ಆ ದಿನವು ಇಸ್ರಾ0ಯೇಲ್ಯರಿಗೆ ಅತಿದೊಡ್ಡ ದುಃಖಕರವಾದ ಕಪ್ಪುದಿನವೇ ಆಗಿರುತ್ತದೆ ಮತ್ತು ಅದರ



ಪರಿಣಾಮವು ವ್ಯಕ್ತವಾಗಿದೆ, ಆ ಭಯಂಕರವಾದ ಯುದ್ಧದಲ್ಲಿ ಯೇಸುಕ್ರಿಸ್ತನು ಪರಲೋಕದಿಂದ ಭೂಮಿಗೆ ಬರುತ್ತಾನೆ. ಅವರ ವೈರಿಗಳಿಂದ ಅವರಿಗೆ ರಕ್ಷಣೆ ಮಾತ್ರವಲ್ಲದೆ, ಅವರ ಪಾಪಗಳ ಮನ್ನಿಸುವಿಕೆಯನ್ನೂ ಆತನು ತರುವವನಿದ್ದಾನೆ. ಆ ಸಂದರ್ಭದಲ್ಲಿ ನಡೆಯುವುದನ್ನು ನಾವು ಸುಲಭವಾಗಿ ಹೇಳಬಹುದು:

1. ಬಹು ಕಾಲದಿಂದ ಚದರಿಸಲ್ಪಟ್ಟಿದ್ದ ಇಸ್ರಾಯೇಲ್ಯರನ್ನು ತಿರುಗಿ ಹಳೆಯ ಸ್ಥಿತಿಗೆ ತರುತ್ತದೆ.

2. ತಮ್ಮ ಸಾಧನೆಗಳಲ್ಲಿ ಎಲ್ಲರೂ ಆಶ್ಚರ್ಯಚಕಿತರಾಗುವಷ್ಟು ಬಲವುಳ್ಳ ದೇಶವಾಗಿ ಇಸ್ರಾಯೇಲ್ ಬದಲಾಗುತ್ತದೆ.

3. ಶತೃ ಸೈನ್ಯಗಳಿಂದ ಆಕ್ರಮಿಸಲ್ಪಡುತ್ತದೆ.

4. ಹೆಚ್ಚು ಕಡಿಮೆ ಇಸ್ರಾಯೇಲ್ಯರ ಪೂರ್ಣ ಅಳಿವು.

5. ಇಸ್ರಾಯೇಲ್ಯರಲ್ಲಿ ಉಳಿದವರ ಪಶ್ಚಾತ್ತಾಪ.

6. ಇಸ್ರಾಯೇಲ್ಯರಲ್ಲಿ ಒಂದು ದೊಡ್ಡ ಭೂಕಂಪ ಉಂಟಾಗಿ ಬಂದ ಸೇನೆಯನ್ನು ಅಳಿಸುತ್ತದೆ.

7. ಯೇಸುಕ್ರಿಸ್ತನ ಪುನರಾಗಮನ.

ಮೇಲಿನ ಸಂಭವಗಳಲ್ಲಿ ಕೊನೆಯದಾಗಿರುವುದನ್ನೇ ನಾವು ಈಗ ಗಮನಿಸಬೇಕಾದದ್ದು ಬಹಳ ಅಗತ್ಯ. ಯಾಕಂದರೆ ಇಡೀ ಪ್ರಪಂಚವನ್ನೇ ಬದಲಾಯಿಸುವ ಆ ಮಹಾದೊಡ್ಡ ಕಾರ್ಯಕ್ರಮಕ್ಕೆ ಮುಂಚಿತವಾಗಿ ನಡೆಯಬೇಕಾದದ್ದು ಇವೆ. ಭೂಕಂಪದಲ್ಲಿ ದೇವರ ಶಕ್ತಿಯು ತೋರಿಬರುವಾಗ ಆಕಾಶವನ್ನು ಗಮನಿಸಿ ನೋಡಬೇಕೆಂಬುದಾಗಿ ವಿಶ್ವಾಸಿಗಳಿಗೆ ಯೇಸುವು ಹೇಳುತ್ತಾನೆ. ಯಾಕಂದರೆ ಅವರ ರಕ್ಷಣೆಯು ಸಮೀಪವಾಗಿದೆ, ಯೇಸು ಆಕಾಶದಿಂದ ಭೂಮಿಗೆ ಬರುವುದನ್ನು ಅವರು ನೋಡಲಿರುವುದರಿಂದ ಅವರು ಮೇಲಕ್ಕೆ ಕಣ್ಣೆತ್ತಿ ನೋಡಬೇಕು ಕರ್ತನು ತಾನೇ ತನ್ನ ಪವಿತ್ರವಾದ ಬಾಯಿಂದ ಇದನ್ನು ಹೇಳಿದ್ದಾನೆ:

*''ಇದಲ್ಲದೆ ಸೂರ್ಯ ಚಂದ್ರ ನಕ್ಷತ್ರಗಳಲ್ಲಿ ಸೂಚನೆಗಳು ತೋರುವುವು, ಭೂಮಿಯ ಮೇಲೆ ಸಮುದ್ರದ ಮತ್ತು ತೆರೆಗಳ ಘೋಷದ ನಿಮಿತ್ತವಾಗಿ ಜನಗಳಿಗೆ ದಿಕ್ಕುಕಾಣದೆ ಸಂಕಟವು ಉಂಟಾಗುವುವು. ಆಕಾಶದ ಶಕ್ತಿಗಳು ಕದಲುವುದರಿಂದ ಮನುಷ್ಯರು ಭಯಹಿಡಿದವರಾಗಿ ಲೋಕಕ್ಕೆ ಏನು ಬರುವುದೋ ಎಂದು ಎದುರು ನೋಡುತ್ತಾ ಪ್ರಾಣಹೋದಂತಾಗುವುದು. ಆಗ ಮನುಷ್ಯಕುಮಾರನು ಬಲದಿಂದಲೂ ಮಹಿಮೆಯಿಂದಲೂ ಮೇಘದಲ್ಲಿ ಬರುವುದನ್ನು ಕಾಣುವರು'' (ಲೂಕ 21:25–27).*

ಸತ್ಯವೇದದಲ್ಲಿ ಹಲವೆಡೆಗಳಲ್ಲಿ ಈ ಸಂಭವವು ವಿವರಿಸಲ್ಪಟ್ಟಿರುತ್ತದೆ. ಅವುಗಳಲ್ಲಿ ಬಹಳ ಪ್ರಾಮುಖ್ಯವಾದದ್ದನ್ನು ಕೆಳಗೆ ಕೊಡಲ್ಪಟ್ಟಿರುತ್ತದೆ,



*''ಇಗೋ ಮೇಘಗಳೊಂದಿಗೆ ಬರುತ್ತಾನೆ, ಎಲ್ಲರ ಕಣ್ಣುಗಳೂ ಆತನನ್ನು ಕಾಣುವವು'' (ಪ್ರಕಟನೆ 1:7).*

*'' ...... ಯೇಸುಕ್ರಿಸ್ತನು ತನ್ನ ಶಕ್ತಿಯನ್ನು ತೋರ್ಪಡಿಸುವ ದೇವದೂತರಿಂದ ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವ ಕಾಲದಲ್ಲಿ ..... ಕರ್ತನಾದ ಯೇಸುವು ದೇವರನ್ನರಿಯದವರಿಗೂ ತನ್ನ ಸುವಾರ್ತೆಗೆ ಒಳಪಡದವರಿಗೂ ಪ್ರತಿಕಾರವನ್ನು ಸಲ್ಲಿಸುವನು'' (2ಥೆಸಲೋನಿಕ 1:7–8).*

*'' ...... ಮಿಂಚು ಮಿಂಚುತ್ತಾ ಆಕಾಶದಲ್ಲಿ ಒಂದುಕಡೆಯಿಂದ ಮತ್ತೊಂದು ಕಡೆಯವರೆಗೂ ಹೇಗೆ ಹೊಳೆಯುವದೋ ಹಾಗೆಯೇ ಮನುಷ್ಯಕುಮಾರನು ತನ್ನ ದಿನದಲ್ಲಿರುವನು''(ಲೂಕ 17:24).*

ಯೇಸು ಮತ್ತೆ ಬರುವ ಈ ಸಂದರ್ಭವು ಲೋಕವನ್ನೇ ಬದಲಿಸುತ್ತದೆ. ಕ್ರಿಸ್ತನು ರಾಜನಾಗಿ ಆಳ್ವಿಕೆಯನ್ನು ಪ್ರಾರಂಭಿಸುತ್ತಾನೆ, ಯೆರೂಸಲೇಮಿನಿಂದ ಪ್ರಾರಂಭವಾಗಿ ಎಲ್ಲಾ ದೇಶಗಳಿಗೂ ಹಬ್ಬಿ, ಭೂಲೋಕಕ್ಕೆಲ್ಲಾ ಸಮಾಧಾನವನ್ನೂ ಒಳ್ಳೆಯದನ್ನು ತರುತ್ತಾನೆ. ಭೂಮಿಯ ಪ್ರದೇಶಗಳ ಮೇಲೂ ಬದಲಾವಣೆಗಳುಂಟಾಗುತ್ತವೆ. ಮರುಭೂಮಿಯಲ್ಲಿ ಸಾಗುವಳಿ ನಡೆಯುವುದು. ನೀರಾವರಿ, ಕಾಲುವೆಗಳು ಒಂದು ಹೊಸವಿಧವಾದ ವ್ಯವಸಾಯಕ್ಕೆ ಸಹಕಾರಿಯಾಗಿ ಮಾನವರು ಉನ್ನತ ಸ್ಥಿತಿಗೆ ಬರುವರು, ಇದಲ್ಲದೆ ಬರಗಾಲ, ಬಡತನ ಇವುಗಳ ಜೊತೆ ಬರುವ ಇತರ ಎಲ್ಲಾ ಸಮಸ್ಯೆಗಳೂ ಇಲ್ಲವಾಗುವುವು.

ನಾವು ಮೊದಲೇ ನೋಡಿದಂತೆ, ಅಂಜೂರದ ಮರವು ಇಸ್ರಾಯೇಲ್ ದೇಶದ ಚಿನ್ಹೆಗಳಲ್ಲಿ ಒಂದಾಗಿದೆ, ಮಾತ್ರವಲ್ಲದೆ ಕಳೆದ ಐವತ್ತು ವರ್ಷಗಳಲ್ಲಿ ಇಸ್ರಾಯೇಲ್ ದೇಶವು ಜೀವ ಹೊಂದಿದ್ದನ್ನು ನೋಡಿದೆವು. ಸಾಮ್ಯದಲ್ಲಿ ಹೇಳಲ್ಪಟ್ಟ ಅಂಜೂರದ ಮರವು ಜೀವವನ್ನು ಹೊಂದಿ, ಎಲೆಗಳನ್ನು ಚಿಗುರುಗಳನ್ನು ಹೊಂದಿದ್ದಾಗಿದೆ, ಆದ್ದರಿಂದಲೇ ಪಶ್ಚಾತ್ತಾಪಕ್ಕೆ ತಕ್ಕ ಫಲಗಳನ್ನು ಕೊಡುವಂತೆ ಮರದ ಶುದ್ಧೀಕರಣವು ಶೀಘ್ರದಲ್ಲಿ ನಡೆಯಲಿದೆ ಎಂದು ಅರಿತಿದ್ದೇವೆ.

ಇದರ ಮಧ್ಯೆ ಕರ್ತನು ಆಕಾಶದಿಂದ ಭೂಮಿಗೆ ಬರುವ ಸಮಯಕ್ಕಾಗಿ ನಾವು ಸಿದ್ಧರಾಗಿರುವುದು ಅತ್ಯಂತ ಅವಶ್ಯವಾಗಿದೆ. ತನ್ನ ಎರಡನೇ ಬರೋಣದ ಬಗ್ಗೆ ತಿಳಿಸಿಕೊಟ್ಟಿರುವಾಗ, ಆತನ ಜನರು ನಿದ್ರಿಸುವವರಾಗಿರದೆ ಎಚ್ಚರವಾಗಿರಬೇಕೆಂದು ತನ್ನ ಮಾತನ್ನು ಕೇಳುವವರಿಗಾಗಿಯೂ, ಅದನ್ನು ಓದುವವರಿಗಾಗಿಯೂ ಎಚ್ಚರಿಸಲ್ಪಟ್ಟಿದೆ.

*''ಆದರೆ ಬರುವುದಕ್ಕಿರುವ ಇವೆಲ್ಲವುಗಳೊಳಗಿಂದ ತಪ್ಪಿಸಿಕೊಳ್ಳುವುದಕ್ಕೂ ಮನುಷ್ಯಕುಮಾರನ ಮುಂದಿ ನಿಂತುಕೊಳ್ಳುವುದಕ್ಕೂ ನೀವು ಪೂರ್ಣ ಶಕ್ತರಾಗುವಂತೆ ಎಲ್ಲಾ ಕಾಲದಲ್ಲಿಯೂ ದೇವರಿಗೆ ವಿಜ್ಞಾಪನೆ ಮಾಡುತ್ತಾ ಎಚ್ಚರವಾಗಿರಿ ಎಂದನು'' (ಲೂಕ 21:36).*